*AUM SRI SAI RAM*

# SRI SATHYA SAI LOKA SEVA BOYS' HOSTELS, ALIKE

(Run by Sri Sathya Sai Loka Seva Sangha (R). Alike)

**Post : SATHYA SAI VIHAR - 574 235**

Bantwal Taluk, Dakshina Kannada District,

KARNATAKA

PHONE : (08255) 238736, 239236

Website : www.alikeonline.org

# PROSPECTUS

# 2017-18

## Aum Sri Sai Ram

**To the attention of those who wish to admit their children to Sri Sathya Sai Loka Seva Boys' Hostels.**

The parents who want to admit their children to our hostel are requested to go through the rules mentioned in the prospectus and then submit their applications only if the rules are agreeable to them. After the children are admitted, it is presumed that the parents and the students have no objection to abide by the said rules.

**Secretary**

Sri Sathya Sai Loka Seva Sangha (R), Alike.

The details given in the prospectus and also the written tests to be conducted are **related to the hostel admission only** and not in any way applicable to the boy's admission to School or College.

The Principal / the Headmaster will admit the boy by following the existing rules framed by the Department of Education from time to time.

**CONTENTS**

I. Introduction

ಪ್ರಸ್ತಾವನೆ

II. Admission to Hostel and Details of Expenditure.

ವಿದ್ಯಾರ್ಥಿ ನಿಲಯಗಳಲ್ಲಿ ದಾಖಲಾತಿ ಮತ್ತು ಖರ್ಚುವೆಚ್ಚಗಳ ವಿವರ

III. Written Tests and interview dates

ಪ್ರವೇಶ ಪರೀಕ್ಷೆ ಮತ್ತು ಸಂದರ್ಶನದ ದಿನಾಂಕಗಳು

IV. Subjects for the written Tests

ಲಿಖಿತ ಪರೀಕ್ಷೆಗೆ ಪಠ್ಯ ವಿಷಯಗಳು

V. Important points to be noted

ಗಮನಿಸಬೇಕಾದ ಕೆಲವು ಮುಖ್ಯ ಅಂಶಗಳು

VI. Admission rules

ದಾಖಲಾತಿಯ ನಿಯಮಗಳು

VII. Some unique features of the Institution

ವಿದ್ಯಾಸಂಸ್ಥೆಯ ಕೆಲವು ವೈಶಿಷ್ಟ್ಯಗಳು

VIII. Co-curricular activities

ಪಠ್ಯೇತರ ಚಟುವಟಿಕೆಗಳು

IX. Facilities available in the campus

ನಿವೇಶನದಲ್ಲಿರುವ ಕೆಲವೊಂದು ಸೌಕರ್ಯಗಳು

X. Disciplinary regulations

ಶಿಸ್ತಿಗೆ ಸಂಬಂಧಿಸಿದ ನಿಯಮಗಳು

XI. Important instructions to parents

ಪೋಷಕರಿಗೆ ವಿಶೇಷ ಸೂಚನೆಗಳು

XII. Daily routine in the hostels

ಹಾಸ್ಟೆಲುಗಳಲ್ಲಿ ದಿನಚರಿ

XIII. Location of the campus and conveyance

ವಿದ್ಯಾನಿವೇಶನದ ಸ್ಥಳ ಮತ್ತು ಸಾರಿಗೆ ಸಂಪರ್ಕ

XIV. Written Test - Syllabus

ಲಿಖಿತ ಪರೀಕ್ಷೆಯ ವಿಷಯಗಳು ಮತ್ತು ಅದರ ವಿವರಗಳು

# SRI SATHYA SAI LOKA SEVA BOYS' HOSTELS, ALIKE.

1. ***Introduction***

The two educational Campuses, *"Sathya Sai Vihar" and "Sharada Vihar"* are run at Alike Village, Bantwal Tq., Vittal Hobli, Dakshina Kannada Dist of Karnataka under the Divine Blessings and Loving care of Bhagavan Sri Sathya Sai Baba. In Sathya Sai Vihar, two hostels by name Sri Sathya Sai Loka Seva Boys' Hostel (PUC Section) and Sri Sathya Sai Loka Seva Boys' Hostel (CBSE Section), in Sharada Vihar a hostel by name Sri Sathya Sai Loka Seva Balakuteera (State Pattern High School) in total Three hostels are functioning on the foundations of ancient Gurukula System of Education with modern facilities.

These institutions have grown on the solid foundation of sacrifice, prayer, penance, efforts, foresight and missionary zeal of Late Reverend Madiyala Narayana Bhat.

These hostels are surrounded by magnificient green hills and beautiful natural scenery far away from distractions of the present day world. The lovely and peaceful environment surrounding these hostels provides proper and encouraging atmosphere for the students to pursue their study.

***II. Admission to Hostel and Details of Expenditure***

The fees as advance to be paid by each student residing in the hostel run by Sri Sathya Sai Loka Seva

Sangha (R) Alike, towards 'Boarding expenses is Rs. 35,000-00**+** Maintenance charges. Total expenses will be assessed at the end of the year and if it falls short of the initial amount will be borne by the parents.

**However this does not include expenses towards their school fees, books, uniforms, stationery, medicine, tour and other contingencies.** Those who are selected will have to pay the above amount in one installment immediately after the announcement of the Entrance Test's result. If once seat is reserved after paying the advance it will not be refunded on any cause if one fails to join the hostel. However, the parents shall pay towards their children's personal expenses separately at the time of admission.

Admission to hostel is open only to those who are seeking admission to VI, VIII and I PUC Classes.

***III. Written tests and Interview dates***

First of all, the students should send their 'Preliminary Application' forms and other certificates to the Secretary, Sri Sathya Sai Loka Seva Sangha (R), Alike. Thereafter, only the selected students will be informed separately about the date and time of Written Tests and Interview. The students who are not selected will also be informed of their non-selection.

**Eligibility for applying to CBSE (Classes VI & VIII):**

Admission is for students who studied in English medium only.

**VIII Standard - State** Pattern (English & Kannada Medium)

Students seeking admission to the class VI are required to submit the photocopy of V class progress report of the first semester / first term assessment and

seeking admission to class VIII are required to submit the photocopy of VII class progress report of the first semester / first term assessment attested by the Head Master / Principal of the school, along with the Preliminary application. Otherwise their application will not be considered.

## I[st] P.U.C. (Boys only)

**A) Arts :**

**H.E.S.P.** (History, Economics, Sociology, Political Science)

**B) Commerce:**

**H.E.B.A.** (History, Economics, Business Studies, Accountancy)

**B.S.B.A.** (Basic Maths, Statistics Business Studies, Accountancy)

**B.E.B.A.** (Basic Maths, Economics, Business Studies, Accountancy)

**C) Science: (Boys who studied X std. SSLC / CBSE in ALIKE campus only.)**

**P.C.M.B.** (Physics, Chemistry, Maths, Biology)

**P.C.M.S.** (Physics, Chemistry, Maths,Statistics)

**ELIGIBILITY to APPLY for the FIRST PUC:**

The students seeking admission to different groups in I PUC should have scored the following percentage in aggregate in their Mid Term Examination or Preparatory Examination of X Standard.

| Groups | Percentage in aggregate | |
|---|---|---|
| a) Arts | i) State | 40% |
| | ii) CBSE / ICSE | 40% or C2 grade |
| b) Commerce | | |
| | i) State | 70% |
| | ii) CBSE / ICSE | 60% or B2 grade |

The students should send an attested photocopy of their marks card of Mid-Term Examination or Preparatory Examination of X Standard, along with the 'Preliminary Application', attested by the Head Master of the School. Otherwise their applications will not be considered.

**Special Note:**

There will be an extra 5% weightage for Sri Sathya Sai Balavikasa Students and those who have special talents in Music, Dance, Drama, Yakshagana etc. Such candidates should enclose the necessary certificates along with the application form.

**IV. Subjects for the Written tests:** Selection of students for admission to various classes is made strictly on the performance of the students in the Written Tests and the Interview.

1) Class VI CBSE : 1) Kannada 2) English
3) Mathematics 4) Science.

2) Class VIII CBSE : 1) Kannada / Sanskrit, 2)Hindi
3) English 4)Mathematics 5) Science.

3) Class VIII (State Pattern English & Kannada Medium):
1) Kannada 2) Hindi 3) English
4) Mathematics 5) Science

4) I[st] P.U.C.: (Boys only)
**Arts** - English
**Commerce** - English & Mathematics.
**Science** - English, Mathematics, Science.

For the Syllabus of the Written Tests see the last pages of the Prospectus.

### *V. IMPORTANT POINTS TO BE NOTED*

1. The detailed information in the prospectus and also the written tests are related only to the hostels run by Sri Sathya Sai Loka Seva Sangha (R), Alike and in no way connected with the admission to schools / college.
2. The Head Masters / Principal of the schools / college will admit the boy in accordance with the existing rules framed by the Department.
3. Address for correspondence regarding admissions:

   ***The Secretary***
   ***Sri Sathya Sai Loka Seva Sangha (R), Alike***
   ***P.O. : SATHYA SAI VIHAR - 574 235***
   ***Bantwal Taluk, Dakshina Kannada Dist,***
   ***Karnataka State.***

4. The application form should be filled in and sent to the above address along with necessary documents as to reach the office on or before **25-03-2017.** Application without attested photocopy of the Progress Report/Marks Card will be rejected.
5. Students can appear for the written tests for admission even if the results of their annual examinations have not been known by the time.
6. Transfer Certificates of the candidates <u>need not be produced</u> at the time of the admission tests.
7. The parent / guardian will be informed by post within 10 days after the test whether the candidate has been selected or not.
8. **No lodging facility** is provided, at the time of Admission Tests, to the parents accompanying their

wards. However, lodgings are available at Mangalore, B.C.Road and Puttur.

9. Students are selected purely on the basis of merit, irrespective of caste, creed or religion. Influence of any kind through any authorities is strictly forbidden.

***VI. ADMISSION RULES :***

1. The application for admission should be signed by the father or mother or guardian (only if the parents are not alive) of the student. All the necessary certificates should be produced during admission.
2. **Fees once paid will not be refunded if a boy is withdrawn from the hostel or sent out of the hostel at any time before the end of the academic year. This will apply even in cases of expulsion.**
3. Hostel admission will not be provided in the following circumstances.
   a) Taking the students to far away places for the medical treatment.
   b) Asking for leave for the festivals, Poojas, felicitations,tours, other examinations etc.
   c) Requesting to attend the marriage functions of the relatives, other than wards own brother's or sister's marriage.
   d) Requesting to attend house warming programme other than their own houses.
   e) Students suffering from severe physical and mental illness such as chronic diseases, heart diseases, epilepsy, bed-wetting, stealing, depression etc.
4. While taking admission to the hostel, the students are requested to submit the following information

to the warden or the deputy warden concerned:

(a) If the ward has undergone serious medical treatment already (b) if special attention is required (c) if the treatment is to be continued (d) eye sight (e) hearing problem.

5. The documents of the previous medical treatment should be handed over to the Warden/Health Supervisor of the hostel.

**6. Admission to the hostel is <u>given for one year only</u>. Renewal of admission for the next year will depend on the character and conduct of the student in the previous year.**

**VII. Some unique features of the Institution :**

Moral and spiritual education based on the five fundamental universal human values SATHYA, DHARMA, SHANTHI, PREMA and AHIMSA is imparted. All important national and religious festivals, birthdays of great saints, patriots and religious leaders are celebrated in a befitting manner. Faith in the fatherhood of God and brotherhood of man is instilled through moral instruction classes, prayers, bhajans, stories and parables drawn from different religions of the world. Here, the students are taught to be self-reliant, active and practical and are encouraged to develop in them a sense of social obligation and service-mindedness. The students are made to feel that hostel is their home.

**VIII. Co-curricular activities :**

A student can involve himself in any of the following activities to ensure an all round development of his personality. They are Wall magazine, Debate,

Chintana, Quiz, Painting, Veda class, Geetha Recitation, Cultural Activities, Tabla, Band-set and Entertainment programmes In addition to these, teaching of classical music, Tabla, Dance, Drama, Yakshagana and Computer are also provided. Games like Foot-ball, Volley-ball, Basket-ball, Cricket and Table-Tennis, Shuttle-badminton etc. are also arranged for building up a strong body and a sound mind. Provisions are also made for Physical exercise, Gymnastics and Yogasana.

**IX. Facilities available in the campus :**

1. In the hostel, a nutritious, well-balanced and relishable vegetarian food is provided under hygienic conditions, Two items are provided for breakfast and snack is served in the evening along with coffee/tea/malt. A cup of hot milk is served after supper. There will be a special dinner on festive occasions.
2. There are vast playgrounds in the campus.
3. Within or adjacent to the campus there are extra facilities such as canteen, bakery, dairy, stationery, laundry, saloon, printing press, a branch of State Bank of India, Post Office, S.T.D., Xerox Centre and Sri Sathya Sai General Hospital.
4. T.V., L.C.D. Projector and D.V.D. for audio-visual education are provided.
5. Well-equipped Physics, Chemistry and Biology laboratories are available.
6. There are teachers for supervising students during study hours.
7. Generators have been installed to provide lighting

in the event of electricity failure.

8. Education in the following co-curricular subjects is provided to the desirous students on payment of a fixed annual fee.
   a) The Karnataka/Hindustani Classical Music
   b) Tabla
   c) Computer Education
   d) Bharathanatyam
   e) Swimming

**X. Disciplinary Regulations :**

Discipline is of paramount importance inside the campus. The students who enter the campus should bear in mind that *"The end of education is character",* and conduct themselves in a manner befitting this ideal.

1. All the students shall wake up by 5-00 A.M., and they must participate in the group prayers and other activities of the day whole-heartedly and punctually.
2. Students have to wear white uniform on prescribed days of the week and the prescribed uniform for yogasanas, sports and games.
3. Students are expected to keep their hostel rooms, study rooms and the campus premises absolutely clean and tidy.
4. *"Early to bed and early to rise",* is a good habit. Light in all the rooms shall be put out exactly at 9-55 P.M. at which time there will be a general prayer. Immediately after the prayer everyone shall retire to bed. The students are permitted to get up even before 5 A.M. if needed.

5. Students are strictly forbidden from indulging in loud talk and idle chat. Absolute silence will have to be maintained at prayer sessions, dining hall, functions and study hours.
6. Growing moustaches and beards, wearing gaudy and exhibitionist clothes, multicoloured lungis and bangles are prohibited. Students are required to wear simple, decent clothes.
7. Students are prohibited from bringing with them any books, newspapers, magazines or any other publications considered harmful or unnecessary by the authorities. Radios, Mobile Phones, Cameras, I-Pods, Pen drives etc., are not permitted.
8. Smoking, drinking, gambling and eating non-vegetarian food including eggs etc., are strictly prohibited.
9. No one should keep with him more than Rs. 100-00 in the hostel rooms. Any extra amount they have can be deposited in the Bank by opening an Account in their names. They may withdraw money from this account as and when they need it. All the Students will have to open S.B. A/c in the Bank or Post Office.
10. Students should not indulge in any kind of monetary transactions among themselves.
11. Serious action will be taken against students who misuse the internet & whose behaviour in schools / college is reported to be against the rules.
12. If a student damages any assets / property of the institution will be penalised.

13. Students are not allowed to drive motor vehicles in the campus.
14. Students are not expected to enter rooms other than the ones allotted to them.
15. Letters/Parcels addressed to students are subject to scrutiny.
16. Humility being the foundation of a noble character, students should cultivate love and reverence towards all elders and teachers.
17. If a student fails to follow the rules and discipline of the hostel, he will be either penalised or expelled from the hostel.

***XI. IMPORTANT INSTRUCTIONS TO PARENTS***

1. It is not advisable for parents to meet their children in the hostel frequently as it might adversly affect their children's progress. Parents or relatives of the students are not expected to visit them till one month after the admission.
2. Parents should not request for permission **to meet their children on working days.** They may meet them on Sundays during fixed time for 1-2 hours only. They are not allowed to take their children outside the campus and enter the class rooms or living rooms.
3. Parents are not supposed to keep the children with them at the time of prayer or functions. They can also participate in such programmes.
4. **Parents are not allowed to bring any eatables except fruits and sweets for their wards.** They are not allowed to sit separately with their children

outside the dining hall and partake food, eatables which they have brought.

5. To retain the union system of institution, participating in Prescribed educational / spiritual camps or festive celebrations and cultural / sports festivals are compulsory to all the students.
6. Students are allowed to go home only during the Mid-term holidays and the summer vacation.
7. One should not come to the campus in drunken stage.Visitors are forbidden to smoke in the campus.
8. When the children fall ill they will be provided medical treatment at the discretion of the warden. However, the parents will have to bear the expenses of the same.
9. Parents are requested to co-operate with the authorities in maintaining good and cordial relationship between the student and the members of the staff. Parents should not talk anything that might damage the respect of the institution and the staff. Disrespect to the Institution and the staff on the part of a student will adversely affect his studies.
10. While the children are at home on vacation, parents should encourage them to continue the good habits (such as prayers in the morning and evening, yogasana, studies and so on) which they have practised in the hostel/School.
11. The Institution shall not be held responsible if a student leaves the campus without permission from the authorities.

12. The students will not be called to phone by the parents. But students can contact their parents once in a week with the permission of the Warden. Students are even restricted to use the Mobiles of Visitors other than own Parents.
13. Please note that accommodation will not be provided here to parents/guardians.
14. The parents are expected to go through the prospectus thoroughly before admitting their children to the hostel. We expect the support and cooperation of the parents in putting into effect all the rules and regulations for the smooth running of the hostel & allround development of the students.
15. To retain the Sanctity of the campus parents / guardians and related visitors are expected to wear decent clothes prescribed by Indian culture. Wearing so called modernised dresses ie Miniskirts / Burmudas etc are objectionable.

# ಶ್ರೀ ಸತ್ಯ ಸಾಯಿ ಲೋಕ ಸೇವಾ ವಿದ್ಯಾರ್ಥಿ ನಿಲಯಗಳು, ಅಳಿಕೆ

## 1. ಪ್ರಸ್ತಾವನೆ:

ಭಗವಾನ್ ಶ್ರೀ ಸತ್ಯಸಾಯಿ ಬಾಬಾರವರ ದಿವ್ಯಮಾರ್ಗದರ್ಶನ ಮತ್ತು ಕೃಪಾಶ್ರಯದಲ್ಲಿ ಬಂಟ್ವಾಳ ತಾಲೂಕಿನ ಅಳಿಕೆ ಗ್ರಾಮದಲ್ಲಿ 'ಸತ್ಯಸಾಯಿ ವಿಹಾರ' ಮತ್ತು 'ಶಾರದಾ ವಿಹಾರ' ಎಂಬ ಎರಡು ವಿದ್ಯಾ ನಿವೇಶನಗಳು ಸ್ಥಾಪಿತವಾಗಿವೆ. ಸತ್ಯಸಾಯಿ ವಿಹಾರದಲ್ಲಿ 'ಶ್ರೀ ಸತ್ಯಸಾಯಿ ಲೋಕ ಸೇವಾ ವಿದ್ಯಾರ್ಥಿನಿಲಯ' (ಹುಡುಗರ ಪಿ.ಯು.ಸಿ. ವಿಭಾಗ) ಮತ್ತು 'ಶ್ರೀ ಸತ್ಯಸಾಯಿ ಲೋಕ ಸೇವಾ ವಿದ್ಯಾರ್ಥಿನಿಲಯ' (ಸಿ.ಬಿ.ಎಸ್.ಇ. ವಿಭಾಗ) ಎಂಬ ಎರಡು ವಿದ್ಯಾರ್ಥಿನಿಲಯಗಳೂ, ಶಾರದಾ ವಿಹಾರದಲ್ಲಿ 'ಶ್ರೀ ಸತ್ಯಸಾಯಿ ಲೋಕಸೇವಾ ಬಾಲಕುಟೀರ' ಎಂಬ ಒಂದು ವಿದ್ಯಾರ್ಥಿನಿಲಯ – ಹೀಗೆ ಒಟ್ಟು ಮೂರು ವಿದ್ಯಾರ್ಥಿನಿಲಯಗಳಿವೆ. ಇವು ಪ್ರಾಚೀನ ಗುರುಕುಲ ಪದ್ಧತಿಯ ಆದರ್ಶಗಳನ್ನು ಅಳವಡಿಸಿಕೊಂಡು, ಆಧುನಿಕ ಸೌಲಭ್ಯಗಳನ್ನು ಒದಗಿಸಿಕೊಂಡು ಕಾರ್ಯನಿರ್ವಹಿಸುತ್ತಿವೆ.

ಪೂಜ್ಯ ಶ್ರೀ ಮಡಿಯಾಲ ನಾರಾಯಣ ಭಟ್ಟರ ತ್ಯಾಗ, ಅವಿರತ ತಪಸ್ಸು, ದೃಢ ಪರಿಶ್ರಮ ಹಾಗೂ ದಾರ್ಶನಿಕ ದೃಷ್ಟಿಕೋನಗಳ ತಳಹದಿಯಲ್ಲಿ ಈ ಸಂಸ್ಥೆಗಳು ಬೆಳೆದು ಬಂದಿವೆ.

ರಮಣೀಯವಾದ ಹಸಿರು ಗುಡ್ಡಗಳಿಂದ ಆವರಿಸಲ್ಪಟ್ಟು, ಪೇಟೆ ಪಟ್ಟಣಗಳ ಸದ್ದು ಗದ್ದಲಗಳಿಂದ ದೂರವಾಗಿದ್ದು, ಇಲ್ಲಿನ ವಿದ್ಯಾರ್ಥಿನಿಲಯಗಳ ನಿಸರ್ಗಸುಂದರ ಪ್ರಶಾಂತ ಪರಿಸರ ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಪೂರಕವಾಗಿ ಹಾಗೂ ಪ್ರೇರಕವಾದ ಸಹಜ ಪರಿಸರವನ್ನೊದಗಿಸಿದೆ.

## 2. ವಿದ್ಯಾರ್ಥಿ ನಿಲಯಗಳಲ್ಲಿ ದಾಖಲಾತಿ ಮತ್ತು ಖರ್ಚುವೆಚ್ಚಗಳ ವಿವರ:

ಶ್ರೀ ಸತ್ಯಸಾಯಿ ಲೋಕಸೇವಾ ಸಂಘ(ರಿ) ಅಳಿಕೆ ಯು ನಡೆಸುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಯ ಊಟೋಪಚಾರಗಳ ಬಗ್ಗೆ ವರ್ಷಕ್ಕೆ ಮುಂಗಡ ಒಟ್ಟು ರೂ. 35,000–00 ಹಾಗೂ ತಗಲುವ ನಿರ್ವಹಣಾವೆಚ್ಚವನ್ನು ನೀಡಬೇಕಾಗುತ್ತದೆ. ವರ್ಷದ ಕೊನೆಯಲ್ಲಿ ಲೆಕ್ಕಾಚಾರ ಮಾಡಿದಾಗ ಕಡಿಮೆಯಾದಲ್ಲಿ, ಬಾಕಿ ಹಣವನ್ನು ಹೆತ್ತವರು ಪುನಃ ನೀಡಬೇಕಾಗುವುದು; ಈ ಮೊಬಲಗಿನಲ್ಲಿ ವಿದ್ಯಾರ್ಥಿಗಳು ಶಾಲೆ/ಕಾಲೇಜು ಶುಲ್ಕ, ಪುಸ್ತಕ. ಸಮವಸ್ತ್ರ, ಬಟ್ಟೆಬರೆ, ಸ್ಟೇಶನರಿ ಸಾಮಾಗ್ರಿಗಳು, ಔಷಧೋಪಚಾರಗಳು, ಪ್ರವಾಸ ವೆಚ್ಚ ಮತ್ತು ಇತರ ವೈಯಕ್ತಿಕ ಖರ್ಚುಗಳಿಗೆ ಬೇಕಾಗಬಹುದಾದ ಹಣ ಸೇರಿರುವುದಿಲ್ಲ. ಮೇಲೆ ಹೇಳಿದ ಶುಲ್ಕವನ್ನು ಪ್ರವೇಶಾವಕಾಶ ದೊರೆತ ತಕ್ಷಣ ಒಂದೇ ಕಂತಿನಲ್ಲಿ ಪಾವತಿಸಿ ಅವಕಾಶವನ್ನು

ಕಾದಿರಿಸಿಕೊಳ್ಳಬೇಕು. **ಪ್ರವೇಶಾವಕಾಶ ಕಾದಿರಿಸಿ ಯಾವುದೇ ಕಾರಣದಿಂದ ದಾಖಲಾತಿ ಮಾಡಿಸದಿದ್ದಲ್ಲಿ ಅವರು ನೀಡಿದ ಮುಂಗಡ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.** ವಿದ್ಯಾರ್ಥಿಗಳ ಶಾಲಾ ಕಾಲೇಜು ಶುಲ್ಕ ಮತ್ತು ವೈಯಕ್ತಿಕ ಖರ್ಚಿಗೆ ಬೇಕಾಗುವ ಹಣವನ್ನು ವಿದ್ಯಾರ್ಥಿಗಳ ಪಾಲಕ – ಪೋಷಕರು ವಿದ್ಯಾರ್ಥಿಗಳ ದಾಖಲಾತಿ ಕಾಲದಲ್ಲೇ ಭರಿಸಬೇಕಾಗುತ್ತದೆ.

VI, VIII ಮತ್ತು ಪ್ರಥಮ ಪಿ.ಯು.ಸಿ. ಗೆ ಸೇರಬಯಸುವ ವಿದ್ಯಾರ್ಥಿಗಳಿಗೆ ಮಾತ್ರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾವಕಾಶವಿದೆ.

## 3. ಪ್ರವೇಶ ಪರೀಕ್ಷೆ ಮತ್ತು ಸಂದರ್ಶನದ ದಿನಾಂಕಗಳು

ಮೊದಲಾಗಿ ವಿದ್ಯಾರ್ಥಿಗಳು ತಮ್ಮ ಆರಂಭದ ಅರ್ಜಿ ಮತ್ತು ಅಗತ್ಯ ದಾಖಲೆಗಳನ್ನು **ಕಾರ್ಯದರ್ಶಿ, ಶ್ರೀ ಸತ್ಯಸಾಯಿ ಲೋಕ ಸೇವಾ ಸಂಘ(ರಿ), ಅಳಿಕೆ,** ಇವರಿಗೆ ಕಳುಹಿಸಬೇಕು. ಅನಂತರ, ಪ್ರವೇಶ ಪರೀಕ್ಷೆಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಮಾತ್ರ ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ದಿನಾಂಕ ಮತ್ತು ಸಮಯವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು. ಆಯ್ಕೆಯಾಗದೆ ಉಳಿದವರಿಗೆ ಆಯ್ಕೆಯಾಗಿಲ್ಲವೆಂದು ತಿಳಿಸಲಾಗುವುದು.

**6ನೇ ಮತ್ತು 8ನೇ ತರಗತಿ** : ಸಿ.ಬಿ.ಎಸ್.ಇ. ಮಾದರಿ (ಹುಡುಗರಿಗೆ ಮಾತ್ರ)
(ಇಂಗ್ಲಿಷ್ ಮಾಧ್ಯಮದಲ್ಲಿ ಅಧ್ಯಯನ ಮಾಡಿದವರಿಗೆ ಮಾತ್ರ).

**8ನೇ ತರಗತಿ** : ರಾಜ್ಯಮಾದರಿ (ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ) (ಹುಡುಗರಿಗೆ ಮಾತ್ರ)

6ನೇ ತರಗತಿಗೆ ಸೇರಬಯಸುವ ವಿದ್ಯಾರ್ಥಿಗಳು 5ನೇ ತರಗತಿಯ ಮೊದಲ ಸೆಮಿಸ್ಟರ್/ಪ್ರಥಮ ಟರ್ಮಿನ ಮೌಲ್ಯಮಾಪನದ ಮತ್ತು 8ನೇ ತರಗತಿಗೆ ಸೇರಬಯಸುವ ವಿದ್ಯಾರ್ಥಿಗಳು 7ನೇ ತರಗತಿಯ ಮೊದಲ ಸೆಮಿಸ್ಟರ್/ಪ್ರಥಮ ಟರ್ಮಿನ ಮೌಲ್ಯಮಾಪನದ ಅಭಿವೃದ್ಧಿ ಪತ್ರದ ಜೆರಾಕ್ಸ್ ಪ್ರತಿಯನ್ನು ಶಾಲಾ ಮುಖ್ಯೋಪಾಧ್ಯಾಯರು/ಪ್ರಾಂಶುಪಾಲರಿಂದ ದೃಢೀಕರಿಸಿ ಅರ್ಜಿಯ ಜತೆ ಕಳುಹಿಸಬೇಕು. ಇಲ್ಲವಾದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

**ಪ್ರಥಮ ಪಿ.ಯು.ಸಿ.:** (ರಾಜ್ಯಮಾದರಿ)

ವಿದ್ಯಾರ್ಥಿಗಳು ಆರಂಭದ ಅರ್ಜಿ ಜತೆ ತಮ್ಮ 10ನೇ ತರಗತಿಯ ಮಧ್ಯವಾರ್ಷಿಕ ಅಥವಾ ಪ್ರಿಪರೇಟರಿ ಪರೀಕ್ಷೆಯ ಅಂಕಪಟ್ಟಿಯ ದೃಢೀಕೃತ ಜೆರಾಕ್ಸ್ ಪ್ರತಿಯನ್ನು ಕಳುಹಿಸಬೇಕು. (ಅಂಕಪಟ್ಟಿಯನ್ನು ಶಾಲಾ ಮುಖ್ಯೋಪಾಧ್ಯಾಯರಿಂದ ದೃಢೀಕರಿಸಿರಬೇಕು.) ಇಲ್ಲವಾದಲ್ಲಿ ಅರ್ಜಿಯನ್ನು ಪರಿಗಣಿಸುವುದಿಲ್ಲ.

(ವಿವರಗಳಿಗಾಗಿ 6 ಮತ್ತು 7ನೇ ಪುಟವನ್ನು ಓದಿ.)

**ವಿಶೇಷ ಸೂಚನೆ**

**ಶ್ರೀ ಸತ್ಯಸಾಯಿ ಬಾಲವಿಕಾಸದ ತರಬೇತಿ ಹೊಂದಿದವರಿಗೆ ಹಾಗೂ ಸಂಗೀತ, ನೃತ್ಯ, ನಾಟಕ, ಯಕ್ಷಗಾನ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿಶೇಷ ಪ್ರತಿಭೆಯಿರುವ ವಿದ್ಯಾರ್ಥಿಗಳಿಗೆ ಅರ್ಜಿಸಲ್ಲಿಸುವಲ್ಲಿ ಇರುವ ಕನಿಷ್ಠ ಅರ್ಹತೆಯಲ್ಲಿ 5% ಅಂಕವನ್ನು ರಿಯಾಯಿತಿ ನೀಡಲಾಗುವುದು. ಈ ಬಗ್ಗೆ ವಿದ್ಯಾರ್ಥಿಗಳು ಸೂಕ್ತ ಪ್ರಮಾಣಪತ್ರಗಳನ್ನು ಅರ್ಜಿಫಾರಂ ಜತೆಗೆ ಲಗ್ತೀಕರಿಸಬೇಕು.**

## 4. ಲಿಖಿತ ಪರೀಕ್ಷೆಗೆ ಪಠ್ಯ ವಿಷಯಗಳು

ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಫಲಿತಾಂಶದ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು. ವಿವಿಧ ತರಗತಿಗಳ ಪ್ರವೇಶಕ್ಕೆ ಲಿಖಿತ ಪರೀಕ್ಷೆಗಳು ಈ ರೀತಿ ಇವೆ.

6ನೇ ತರಗತಿ(CBSE) (ಹುಡುಗರಿಗೆ ಮಾತ್ರ): 1) ಕನ್ನಡ ಅಥವಾ ಸಂಸ್ಕೃತ
2) ಇಂಗ್ಲಿಷ್ 3) ಗಣಿತ 4) ವಿಜ್ಞಾನ

8ನೇ ತರಗತಿ (CBSE) (ಹುಡುಗರಿಗೆ ಮಾತ್ರ) : 1) ಕನ್ನಡ ಅಥವಾ ಸಂಸ್ಕೃತ
2) ಹಿಂದಿ 3) ಇಂಗ್ಲಿಷ್ 4) ಗಣಿತ 5) ವಿಜ್ಞಾನ

8ನೇ ತರಗತಿ (State) (ಹುಡುಗರಿಗೆ ಮಾತ್ರ) :(ಕನ್ನಡ ಮತ್ತು ಆಂಗ್ಲ ಮಾಧ್ಯಮ)
1) ಕನ್ನಡ 2) ಹಿಂದಿ 3) ಇಂಗ್ಲಿಷ್ 4) ಗಣಿತ 5) ವಿಜ್ಞಾನ

ಪ್ರಥಮ ಪಿಯುಸಿ: (ಹುಡುಗರಿಗೆ ಮಾತ್ರ)

1) ಕಲಾ ವಿಭಾಗ– ಇಂಗ್ಲಿಷ್
2) ವಾಣಿಜ್ಯ ವಿಭಾಗ– ಇಂಗ್ಲಿಷ್ ಮತ್ತು ಗಣಿತ
3) ವಿಜ್ಞಾನ ವಿಭಾಗ – ಇಂಗ್ಲಿಷ್, ಗಣಿತ ಮತ್ತು ವಿಜ್ಞಾನ.

ಲಿಖಿತ ಪರೀಕ್ಷೆಗಳ ಸಿಲಬಸ್‌ನ್ನು ಕೊನೆಯ ಪುಟಗಳಲ್ಲಿ ಕೊಡಲಾಗಿದೆ.

## 5. ಗಮನಿಸಬೇಕಾದ ಕೆಲವು ಮುಖ್ಯ ಅಂಶಗಳು

1. ಈ ಮಾಹಿತಿ ಪತ್ರಿಕೆಯ ವಿವರಗಳು ಮತ್ತು ಪ್ರವೇಶ ಪರೀಕ್ಷೆಗಳು ಕೇವಲ ಶ್ರೀ ಸತ್ಯಸಾಯಿ ಲೋಕಸೇವಾ ಸಂಘ(ರಿ)ವು ನಡೆಸುವ ವಿದ್ಯಾರ್ಥಿನಿಲಯಗಳ ದಾಖಲಾತಿಗೆ ಮಾತ್ರ ಸಂಬಂಧಪಟ್ಟಿದ್ದು, ವಿದ್ಯಾರ್ಥಿಯ ಶಾಲೆ / ಕಾಲೇಜು ದಾಖಲಾತಿಗೆ ಯಾವ ರೀತಿಯಲ್ಲೂ ಅನ್ವಯಿಸುವುದಿಲ್ಲ.
2. ವಿದ್ಯಾರ್ಥಿಗಳ ಶಾಲೆ/ಕಾಲೇಜು ದಾಖಲಾತಿಯುನ್ನು ಸರಕಾರದ ನಿಯಮಾನುಸಾರವಾಗಿಯೇ ಆಯಾ ಶಾಲೆ/ಕಾಲೇಜು ಮುಖ್ಯಸ್ಥರು ಮಾಡಿಕೊಳ್ಳುತ್ತಾರೆ.
3. ವಿದ್ಯಾರ್ಥಿನಿಲಯದಲ್ಲಿ ದಾಖಲಾತಿಗೆ ಸಂಬಂಧಿಸಿದ ಪತ್ರ ವ್ಯವಹಾರಗಳ ವಿಳಾಸ

**ಕಾರ್ಯದರ್ಶಿ**
**ಶ್ರೀ ಸತ್ಯಸಾಯಿ ಲೋಕ ಸೇವಾ ಸಂಘ(ರಿ), ಅಳಿಕೆ**
**ಅಂಚೆ: ಸತ್ಯಸಾಯಿ ವಿಹಾರ – 574235**
**ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ ರಾಜ್ಯ.**

4. ಈ ಮಾಹಿತಿ ಪತ್ರಿಕೆಗೆ ಲಗ್ತೀಕರಿಸಿರುವ ಪ್ರಾರಂಭಿಕ **ಅರ್ಜಿಫಾರಂ** ತುಂಬಿಸಿ **ಅಂಕಪಟ್ಟಿಯ ಜೆರಾಕ್ಸ್ ಪ್ರತಿ** (ಶಾಲಾ ಮುಖ್ಯೋಪಾಧ್ಯಾಯ/ಪ್ರಾಂಶುಪಾಲರಿಂದ ದೃಢೀಕರಿಸಲ್ಪಟ್ಟಿರುವ)**ಯೊಂದಿಗೆ** ಮೇಲಿನ ವಿಳಾಸಕ್ಕೆ ದಿನಾಂಕ **25–3–2017** ರೊಳಗೆ ತಲಪುವಂತೆ ಕಳುಹಿಸಬೇಕು. ಅಂಕಪಟ್ಟಿಯ ಪ್ರತಿಗಳನ್ನು ಲಗ್ತೀಕರಿಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
5. ವಾರ್ಷಿಕ ಪರೀಕ್ಷೆಗಳ ಫಲಿತಾಂಶಗಳು ಈ ಸಮಯದಲ್ಲಿ ತಿಳಿದು ಬರದಿದ್ದರೂ ವಿದ್ಯಾರ್ಥಿಗಳು ದಾಖಲಾತಿಯ ಪರೀಕ್ಷೆಗಳಿಗೆ ಹಾಜರಾಗಬಹುದು.
6. ಪ್ರವೇಶ ಪರೀಕ್ಷೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳು ವರ್ಗಾವಣೆ ಪತ್ರ (T.C.) ತರಬೇಕಾದ ಅವಶ್ಯಕತೆಯಿಲ್ಲ.
7. ಪ್ರವೇಶ ಪರೀಕ್ಷೆಯ ಫಲಿತಾಂಶವನ್ನು ಪರೀಕ್ಷೆ ನಡೆದ ಹತ್ತು ದಿನಗಳೊಳಗೆ ತಿಳಿಸಲಾಗುವುದು.
8. ಪ್ರವೇಶ ಪರೀಕ್ಷೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳ ಜತೆಯಲ್ಲಿ ಬರುವ ಹೆತ್ತವರಿಗೆ ಯಾ ರಕ್ಷಕರಿಗೆ ರಾತ್ರಿ ತಂಗಲು ಇಲ್ಲಿ ಪ್ರತ್ಯೇಕ ವ್ಯವಸ್ಥೆ ಇರುವುದಿಲ್ಲ. ಪುತ್ತೂರು, ಮಂಗಳೂರು ಹಾಗೂ ಬಿ.ಸಿ.ರೋಡ್‌ನಲ್ಲಿ ವಸತಿ ಸೌಕರ್ಯವಿರುವ ಹೋಟೆಲುಗಳಿವೆ.
9. ವಿದ್ಯಾರ್ಥಿನಿಲಯಗಳಲ್ಲಿ ಜಾತಿ, ಮತ, ವರ್ಗ, ಭಾಷೆ ಮುಂತಾದವುಗಳನ್ನು ಪರಿಗಣಿಸದೆ ಅರ್ಹತೆಯ ಆಧಾರದಲ್ಲಿ ಮಾತ್ರ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಯಾವುದೇ ರೀತಿಯ ಪ್ರಭಾವಬೀರುವ ಯತ್ನ ಆಕ್ಷೇಪಾರ್ಹ.

## 6. ದಾಖಲಾತಿಯ ನಿಯಮಗಳು

1) ದಾಖಲಾತಿಯ ಅರ್ಜಿಗೆ ತಂದೆ, ತಾಯಿ ಅಥವಾ ಅವರು ಬದುಕಿಲ್ಲದಿದ್ದಲ್ಲಿ ಪೋಷಕರು ಸಹಿ ಮಾಡಬೇಕು. ದಾಖಲಾತಿ ಸಂದರ್ಭದಲ್ಲಿ ಅಗತ್ಯವಾಗಿ ಬೇಕಾಗುವ ಸರ್ಟಿಫಿಕೇಟ್‌ಗಳನ್ನು ನೀಡಬೇಕು.
2) **ಯಾವುದೇ ಕಾರಣಕ್ಕಾಗಿಯಾದರೂ ವಿದ್ಯಾರ್ಥಿಯನ್ನು ಆ ಶಾಲಾ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ವಿದ್ಯಾರ್ಥಿನಿಲಯದಿಂದ ಹಿಂತೆಗೆದುಕೊಂಡ ಪಕ್ಷದಲ್ಲಿ ಅಥವಾ ಅವನು ನಿಯಮಗಳಿಗೆ ತಪ್ಪಿನಡೆದು ಹೊರಹಾಕಲ್ಪಟ್ಟಲ್ಲಿ ಯಾವುದೇ ಶುಲ್ಕವನ್ನು ಎಷ್ಟುಮಾತ್ರಕ್ಕೂ ಮರುಪಾವತಿ ಮಾಡಲಾಗುವುದಿಲ್ಲ.**

3) ಈ ಕೆಳಗಿನ ಸಂದರ್ಭಗಳಲ್ಲಿ ವಿದ್ಯಾರ್ಥಿನಿಲಯಗಳಲ್ಲಿ ದಾಖಲಾತಿಗೆ ಅವಕಾಶವಿರುವುದಿಲ್ಲ.

ಅ) ಚಿಕಿತ್ಸೆಗಾಗಿ ಇಲ್ಲಿಂದ ದೂರದ ಊರುಗಳಿಗೆ ಕರೆದುಕೊಂಡು ಹೋಗಬೇಕಾದಲ್ಲಿ,

ಆ) ಅಕ್ಟೋಬರ್ ರಜೆ ಮತ್ತು ಬೇಸಿಗೆಯ ದೀರ್ಘ ರಜೆಗಳ ಹೊರತಾಗಿ ಉಳಿದ ಸಣ್ಣಪುಟ್ಟ ರಜೆಗಳಲ್ಲಿ, ಹಬ್ಬ, ಪೂಜೆ, ಹರಕೆ ಒಪ್ಪಿಸುವುದು, ಯಾತ್ರೆ, ಸನ್ಮಾನಗಳು, ಇತರೆ ಸಭೆ ಸಮಾರಂಭಗಳು, ಶಾಲಾಭ್ಯಾಸಗಳಿಗೆ ಸಂಬಂಧಿಸದ ಪರೀಕ್ಷೆಗಳಿಗೆ ಹಾಜರಾಗುವುದು, ಬಂಧುಬಳಗದವರನ್ನು ಕಾಣುವುದೇ ಮುಂತಾದವುಗಳಿಗೆ ಮಕ್ಕಳನ್ನು ಕರೆದುಕೊಂಡು ಹೋಗಲು ಅಪೇಕ್ಷೆ ಇದ್ದಲ್ಲಿ,

ಇ) ವಿದ್ಯಾರ್ಥಿಯ ಖಾಸಾ ಸೋದರ ಸೋದರಿಯರ (ಒಂದೇ ತಂದೆ ತಾಯಿ ಮಕ್ಕಳು) ಮದುವೆಯ ಹೊರತಾಗಿ ಬೇರೆ ಸಮೀಪದ ಬಂಧುಗಳ ಮದುವೆ ಇತ್ಯಾದಿಗಳಿಗೆ ಕರೆದುಕೊಂಡು ಹೋಗುವ ಅಪೇಕ್ಷೆ ಇದ್ದಲ್ಲಿ.

ಈ) ವಿದ್ಯಾರ್ಥಿಯ ತಂದೆ ತಾಯಂದಿರು ತಮ್ಮ ಸ್ವಂತ ವಾಸಕ್ಕೆ ಕಟ್ಟುವ ಮನೆಯ ಹೊರತಾಗಿ ಇತರ ಗೃಹಪ್ರವೇಶ ಸಮಾರಂಭಗಳಿಗೆ ಮಕ್ಕಳನ್ನು ಕರೆದುಕೊಂಡು ಹೋಗಲು ಬಯಸಿದಲ್ಲಿ.

4) ದಾಖಲಾತಿಗೆ ಪೂರ್ವದಲ್ಲಿ ವಿದ್ಯಾರ್ಥಿ ಚಿಕಿತ್ಸೆಗೆ ಒಳಗಾಗಿದ್ದು

ಅ) ಆರೋಗ್ಯದ ಕುರಿತು ಪ್ರತ್ಯೇಕ ಲಕ್ಷ್ಯಕೊಡಬೇಕಾದ ಸನ್ನಿವೇಶವಿದ್ದಲ್ಲಿ,

ಆ) ಸೇರಿದ ಬಳಿಕ ಚಿಕಿತ್ಸೆಯನ್ನು ಮುಂದುವರಿಸಬೇಕಾಗುವ ಸಂಭವವಿದ್ದಲ್ಲಿ,

ಇ) ಶ್ರವಣ ದೌರ್ಬಲ್ಯ (ಕಿವಿ ಸರಿಯಾಗಿ ಕೇಳಿಸದಿರುವುದು) ಮತ್ತು ದೃಷ್ಟಿ ದೌರ್ಬಲ್ಯದಿದ್ದಲ್ಲಿ (ಕಣ್ಣಿನ ಬಲಹೀನತೆ),

ಈ) ಅಥವಾ ಇನ್ಯಾವುದೇ ಸಮಸ್ಯೆಗಳಿದ್ದಲ್ಲಿ, ಅವರನ್ನು ಸೇರಿಸುವ ಸಂದರ್ಭದಲ್ಲೇ ಸಂಬಂಧಪಟ್ಟ ವಾರ್ಡನರ, ಡೆಪ್ಟಿವಾರ್ಡನರ ಹಾಗೂ ಆರೋಗ್ಯಮೇಲ್ವಿಚಾರಕರ ಗಮನಕ್ಕೆ ತರಬೇಕಾಗಿರುತ್ತದೆ.

5) ಹಿಂದಿನ ಚಿಕಿತ್ಸೆಯ ದಾಖಲೆಗಳನ್ನು ನಿಲಯದ ಆರೋಗ್ಯ ಮೇಲ್ವಿಚಾರಕರ ವಶಕ್ಕೆ ನೀಡತಕ್ಕದ್ದು.

6) **ವಿದ್ಯಾರ್ಥಿನಿಲಯಕ್ಕೆ ದಾಖಲಾತಿಯು ಒಂದು ವರ್ಷಕ್ಕೆ ಮಾತ್ರ ಸೀಮಿತ. ಮುಂದಿನ ವರ್ಷದ ದಾಖಲಾತಿಯ ನವೀಕರಣವನ್ನು ವಿದ್ಯಾರ್ಥಿಯ ಗುಣನಡತೆಯ ಆಧಾರದ ಮೇಲೆ ನಿರ್ಧರಿಸಲಾಗುವುದು.**

## 7. ವಿದ್ಯಾಸಂಸ್ಥೆಯ ಕೆಲವು ವೈಶಿಷ್ಟ್ಯಗಳು

ಇಲ್ಲಿ ಸತ್ಯ, ಧರ್ಮ, ಶಾಂತಿ, ಪ್ರೇಮ ಮತ್ತು ಅಹಿಂಸೆಗಳೆಂಬ ಮೂಲಭೂತ ಮಾನವೀಯ ಮೌಲ್ಯಗಳನ್ನು ಆಧರಿಸಿ, ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣವನ್ನು

ನೀಡಲಾಗುವುದು. ಪ್ರಮುಖ ರಾಷ್ಟ್ರೀಯ ಮತ್ತು ಧಾರ್ಮಿಕ ಹಬ್ಬಗಳು ಮತ್ತು ಸಂತರ, ರಾಷ್ಟ್ರಭಕ್ತರ, ಧಾರ್ಮಿಕ ನಾಯಕರ ಹುಟ್ಟುಹಬ್ಬಗಳು ಯಥಾಯೋಗ್ಯ ಆಚರಿಸಲ್ಪಡುವುವು. ದೈವಪಿತೃತ್ವ ಮತ್ತು ಮಾನವ ಭ್ರಾತೃತ್ವಗಳನ್ನು ನೈತಿಕ ಶಿಕ್ಷಣ ತರಗತಿ, ಪ್ರಾರ್ಥನೆ, ಜಗತ್ತಿನ ವಿವಿಧ ಧರ್ಮಗಳಿಂದ ಆಯ್ದ ಕಥೆಗಳು, ದೃಷ್ಟಾಂತ ಕಥೆಗಳು ಸ್ವಾವಲಂಬಿಗಳಾಗುವಂತೆ, ಸದಾ ಲವಲವಿಕೆಯಿಂದ ಕೂಡಿ ಕಾರ್ಯಶೀಲರಾಗಿರುವಂತೆ ಮಾರ್ಗದರ್ಶನ ಮಾಡಲಾಗುವುದು. ಸಾಮಾಜಿಕ ಹೊಣೆಗಾರಿಕೆ ಮತ್ತು ಸೇವಾಭಾವನೆಗಳನ್ನು ಬೆಳೆಸುವಂತೆ ಪ್ರೋತ್ಸಾಹಿಸಲಾಗುವುದು.

## 8. ಪಠ್ಯೇತರ ಚಟುವಟಿಕೆಗಳು

ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ವ್ಯಕ್ತಿತ್ವದ ಸರ್ವಾಂಗೀಣ ಉನ್ನತಿಯನ್ನು ಸಾಧಿಸಲು ಸಾಧ್ಯವಾಗುವಂತೆ ವೈವಿಧ್ಯಪೂರ್ಣವಾದ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಬಹಳಷ್ಟು ಅವಕಾಶಗಳನ್ನು ಒದಗಿಸಲಾಗುವುದು. ಭಿತ್ತಿ ಪತ್ರಿಕೆ, ಚರ್ಚಾಕೂಟ, ಕ್ವಿಜ್, ಡ್ರಾಯಿಂಗ್ ಮತ್ತು ಪೈಂಟಿಂಗ್, ವೇದ, ಗೀತೆ, ಸಂಗೀತ, ನೃತ್ಯ, ನಾಟಕ, ಯಕ್ಷಗಾನ, ತಬಲ, ಮೇಳವಾದ್ಯ, ಆಟೋಟ ಮುಂತಾದವುಗಳಲ್ಲಿ ತರಬೇತಿ ನೀಡಲಾಗುವುದು. ಮನರಂಜನಾ ಕಾರ್ಯಕ್ರಮ, ವಿದ್ಯಾರ್ಥಿಗಳಿಂದ ದೈನಂದಿನ ಚಿಂತನ ಕಾರ್ಯಕ್ರಮ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಕಂಪ್ಯೂಟರ್ ಶಿಕ್ಷಣದ ವ್ಯವಸ್ಥೆಯೂ (ಐಚ್ಛಿಕ) ಇದೆ. ಫುಟ್‌ಬಾಲ್, ವಾಲಿಬಾಲ್, ಕ್ರಿಕೆಟ್, ಬಾಸ್ಕೆಟ್‌ಬಾಲ್, ಷಟಲ್‌ಬ್ಯಾಡ್‌ಮಿಂಟನ್ ಮುಂತಾದ ಆಟಗಳೂ ಇವೆ. ಶಾರೀರಿಕ ವ್ಯಾಯಾಮ ಮತ್ತು ಯೋಗಾಸನಗಳಿಗೆ ಅವಕಾಶವನ್ನು ಕಲ್ಪಿಸಲಾಗಿದ್ದು ಶಾರೀರಿಕ ವ್ಯಾಯಾಮದ ಬಗ್ಗೆ ಇಲ್ಲಿ ಒಂದು ಚಿಕ್ಕ ಗರಡಿಮನೆಯೂ ಇದೆ.

## 9. ನಿವೇಶನದಲ್ಲಿರುವ ಕೆಲವೊಂದು ಸೌಕರ್ಯಗಳು

1) ವಿದ್ಯಾರ್ಥಿಗಳಿಗೆ ಪೌಷ್ಟಿಕ, ಸಮತೂಕದ ಹಾಗೂ ರುಚಿಕರವಾದ ಸಸ್ಯಾಹಾರವನ್ನು ಮಾತ್ರ ನೀಡಲಾಗುವುದು. ಬೆಳಗಿನ ಉಪಾಹಾರಕ್ಕೆ ಕಾಫಿ, ಚಹಾ ಅಥವಾ ಕಷಾಯದೊಂದಿಗೆ ಎರಡು ಬಗೆಯ ತಿಂಡಿಗಳನ್ನೂ, ಸಂಜೆ ಲಘು ಉಪಾಹಾರವನ್ನೂ ನೀಡಲಾಗುವುದು.
2) ಇಲ್ಲಿ ವಿಶಾಲವಾದ ಆಟದ ಬಯಲುಗಳಿವೆ.
3) ವಿದ್ಯಾನಿವೇಶನದಲ್ಲೇ ಶ್ರೀ ಸತ್ಯಸಾಯಿ ಜನರಲ್ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಸ್ಟೇಷನರಿ, ಕ್ಯಾಂಟೀನು, ಬೇಕರಿ, ಡೈರಿ, ಲಾಂಡ್ರಿ, ಸೆಲೂನ್, ಮುದ್ರಣಾಲಯ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಅಂಚೆ ಕಛೇರಿ, ಎಸ್‌ಟಿಡಿ, ಜೆರಾಕ್ಸ್ ಸೆಂಟರ್ ಮುಂತಾದ ಸೌಲಭ್ಯಗಳಿವೆ.

4) ಮಕ್ಕಳ ಉಪಯೋಗಕ್ಕೆ ಟಿ.ವಿ. (ಎಲ್.ಸಿ.ಡಿ., ಡಿ.ವಿ.ಡಿ ಸಹಿತ) ಗಳಿವೆ.

5. ಸುಸಜ್ಜಿತವಾದ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಮತ್ತು ಜೀವಶಾಸ್ತ್ರ ಪ್ರಯೋಗಾಲಯಗಳಿವೆ.

6) ಅಭ್ಯಾಸದ ವೇಳೆಯಲ್ಲಿ ವಿದ್ಯಾರ್ಥಿಗಳನ್ನು ನೋಡಿಕೊಳ್ಳಲು ಪ್ರತ್ಯೇಕ ಅಧ್ಯಾಪಕರಿದ್ದಾರೆ.

7) ಇಲಾಖೆಯ ವಿದ್ಯುಚ್ಛಕ್ತಿ ಪೂರೈಕೆ ನಿಂತಾಗ ಜನರೇಟರ್ ವ್ಯವಸ್ಥೆ ಇದೆ.

8) ನಿಶ್ಚಿತ ಶುಲ್ಕ ನೀಡಿದಲ್ಲಿ ಈ ಕೆಳಗಿನ ಪಠ್ಯೇತರ ವಿಷಯಗಳಲ್ಲಿ ಶಿಕ್ಷಣ ನೀಡುವ ವ್ಯವಸ್ಥೆಯನ್ನು ಮಾಡಲಾಗುವುದು.

i) ಕರ್ನಾಟಕ ಶಾಸ್ತ್ರೀಯ ಸಂಗೀತ ii) ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತ.

iii) ತಬಲ iv) ಕಂಪ್ಯೂಟರ್ ಶಿಕ್ಷಣ. v) ಭರತನಾಟ್ಯ v) ಸ್ವಿಮ್ಮಿಂಗ್

## 10. ಶಿಸ್ತಿಗೆ ಸಂಬಂಧಿಸಿದ ನಿಯಮಗಳು

ಇಲ್ಲಿಯ ವಿದ್ಯಾಸಂಸ್ಥೆಗಳಲ್ಲಿ ಶಿಸ್ತುಪಾಲನೆಗೆ ಅತ್ಯಂತ ಮಹತ್ವವಿದೆ. ಶಾಲೆ, ಕಾಲೇಜು, ಮತ್ತು ಹಾಸ್ಟೆಲುಗಳಲ್ಲಿ ಶಿಸ್ತು ನಿಯಮಗಳಿಗೆ ವಿದ್ಯಾರ್ಥಿಗಳು ಹೊಂದಿಕೊಳ್ಳತಕ್ಕದ್ದು. ಅಧ್ಯಾಪಕರೊಂದಿಗೆ ಮತ್ತು ಮತ್ತು ಕಾರ್ಯಕರ್ತರೊಂದಿಗೆ ವಿದ್ಯಾರ್ಥಿಗಳು ವಿನಯ ವಿಧೇಯತೆಯಿಂದಿದ್ದು ಆತ್ಮೀಯವಾದ ಮಾನವೀಯ ಸಂಬಂಧವನ್ನು ಉಳಿಸಿಕೊಳ್ಳ ಬೇಕಾಗುತ್ತದೆ "ಶಿಕ್ಷಣದ ಅಂತಿಮ ಗುರಿ ಸಚ್ಚಾರಿತ್ರ್ಯ ನಿರ್ಮಾಣ" ಎಂಬ ತತ್ವವನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಂಡು, ಈ ಆದರ್ಶಕ್ಕೆ ಸರಿಯಾಗಿ ನಡೆದುಕೊಳ್ಳಬೇಕು.

1) ವಿದ್ಯಾರ್ಥಿಗಳು ನಿತ್ಯ ಬೆಳಿಗ್ಗೆ 5–00 ಗಂಟೆಗೆ ಏಳಬೇಕು ಮತ್ತು ಆಯಾ ದಿನದ ಸಾಮೂಹಿಕ ಪ್ರಾರ್ಥನೆ ಮತ್ತಿತರ ಚಟುವಟಿಕೆಗಳಲ್ಲಿ ನಿಯಮಿತ ಸಮಯದಲ್ಲಿ ಭಾಗವಹಿಸಬೇಕು ಮತ್ತು ರಾತ್ರಿ 9–55ಕ್ಕೆ ಸರಿಯಾಗಿ ದೀಪ ಆರಿಸಿ ಹಾಸಿಗೆಯಲ್ಲಿ ದಿನದ ಕೊನೆಯ ಪ್ರಾರ್ಥನೆ ಮಾಡಿ ನಿದ್ರಿಸುವುದು. ಬೇಕಿದ್ದಲ್ಲಿ ಬೆಳಗ್ಗೆ 5–00 ಗಂಟೆಗೆ ಮುಂಚಿತವಾಗಿಯೂ ಏಳಬಹುದು.

2) ವಿದ್ಯಾರ್ಥಿಗಳು ನಿಗದಿತ ಸಮವಸ್ತ್ರವನ್ನು ವಾರದಲ್ಲಿ ನಿಗದಿತ ದಿನಗಳಲ್ಲಿ ಧರಿಸಬೇಕು. ಇದೇ ರೀತಿ ಯೋಗಾಸನ, ಆಟೋಟ ಮುಂತಾದ ಚಟುವಟಿಕೆಗಳಲ್ಲಿಯೂ ನಿಗದಿತ ಸಮವಸ್ತ್ರವನ್ನು ಧರಿಸಬೇಕು.

3) ತಮ್ಮ ಹಾಸ್ಟೆಲ್ ವಾಸದ ಕೋಣೆ, ಅಧ್ಯಯನದ ಕೊಠಡಿ ಮತ್ತು ನಿವೇಶನದ ಪರಿಸರವನ್ನು ಶುಚಿಯಾಗಿಯೂ, ಓರಣವಾಗಿಯೂ ಇರಿಸಿಕೊಳ್ಳಬೇಕು.

4) ವಿದ್ಯಾರ್ಥಿಗಳು ನಿವೇಶನದೊಳಗೆ ಧ್ವನಿ ಏರಿಸಿ ಮಾತನಾಡುವುದನ್ನು ಮತ್ತು ಅನವಶ್ಯಕವಾಗಿ ಹರಟೆಹೊಡೆಯುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

ಪ್ರಾರ್ಥನಾಕೂಟಗಳಲ್ಲಿ, ಅಭ್ಯಾಸದ ತರಗತಿಗಳಲ್ಲಿ, ಸಭೆ ಸಮಾರಂಭಗಳಲ್ಲಿ, ಭೋಜನಾಲಯದಲ್ಲಿ ಮತ್ತು ರಾತ್ರಿಯ ಪ್ರಾರ್ಥನೆಯ ನಂತರ ಸಂಪೂರ್ಣ ಮೌನವನ್ನು ಪಾಲಿಸಬೇಕು.

5) ವಿದ್ಯಾರ್ಥಿಗಳು ಗಡ್ಡ, ಮೀಸೆಗಳನ್ನು ಬೆಳೆಸುವುದು, ವಿಲಕ್ಷಣವಾದ ಬಣ್ಣ ಬಣ್ಣದ ಬಟ್ಟೆಗಳನ್ನು, ಲುಂಗಿಗಳನ್ನು ಧರಿಸುವುದು ಮತ್ತು ಕೈಕಡಗಗಳನ್ನು ಹಾಕಿಕೊಳ್ಳುವುದೇ ಮುಂತಾದವುಗಳಿಗೆ ಇಲ್ಲಿ ಅವಕಾಶ ಇಲ್ಲ. ಸರಳವಾದ ಸಭ್ಯ ಉಡುಪುಗಳನ್ನು ಧರಿಸಬೇಕು.

6) ಅನುಚಿತ, ಆತಂಕಕಾರಿ ಮತ್ತು ಅನಗತ್ಯವೆಂದು ಪರಿಗಣಿಸುವ ಪುಸ್ತಕವನ್ನಾಗಲಿ ಹಾಗೂ ಪತ್ರಿಕೆಗಳನ್ನಾಗಲೀ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತರುವುದನ್ನು ನಿಷೇಧಿಸಲಾಗಿದೆ. ವೈಯಕ್ತಿಕ ರೇಡಿಯೋ, ಮೆಮರಿಕಾರ್ಡ್ಸ್, ಮೊಬೈಲ್‌ಫೋನ್, ಕ್ಯಾಮರಾ, ಐಪಾಡ್ (i pod) ಇತ್ಯಾದಿಗಳನ್ನು ಬಳಸಲು ಅವಕಾಶವಿಲ್ಲ. ಸಂಸ್ಥೆಯು ನಿಗದಿಪಡಿಸಿದ ಫೋನುಗಳ ಹೊರತು ಬೇರೆ ಕಡೆಗಳಲ್ಲಿ ಫೋನ್ ಮಾಡುವುದು ಆಕ್ಷೇಪಾರ್ಹ.

7) ಧೂಮಪಾನ ಹಾಗೂ ಮಾದಕ ಪದಾರ್ಥ, ಮೊಟ್ಟೆ, ಮಾಂಸಾಹಾರವೇ ಮೊದಲಾದವುಗಳನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

8) ವಿದ್ಯಾರ್ಥಿಗಳು ವಸತಿ ಕೋಣೆಯಲ್ಲಿ ತಮ್ಮ ಸ್ವಾಧೀನ ರೂ. 100–00 ಕ್ಕಿಂತ ಹೆಚ್ಚು ನಗದು ಇರಿಸಿಕೊಳ್ಳಬಾರದು. ಹೆಚ್ಚಿನ ಹಣವನ್ನು ಹಾಸ್ಟೆಲ್ ಆಫೀಸ್‌ನಲ್ಲಿ ಸ್ಪೆಷಲ್ ಅಕೌಂಟ್ ತೆರೆದು ಬೇಕಾದಾಗ ಪಡಕೊಳ್ಳುವಂತೆ ಇರಿಸಬಹುದು. ಅಥವಾ ಬ್ಯಾಂಕ್ ಖಾತೆ ತೆರೆದು ಇರಿಸಿಕೊಳ್ಳಬಹುದು.

9) ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳು ತಮ್ಮ ತಮ್ಮೊಳಗೆ ಅಥವಾ ಇತರರೊಡನೆ ಯಾವುದೇ ಆರ್ಥಿಕ ವ್ಯವಹಾರ ಹಾಗೂ ಇನ್ನಿತರ ಲೇವಾದೇವಿಗಳನ್ನು ಇಟ್ಟುಕೊಳ್ಳಬಾರದು.

10) ಅಧ್ಯಯನ ಮಾಡುವ ಶಾಲಾ ಕಾಲೇಜುಗಳಿಂದ ವಿದ್ಯಾರ್ಥಿಯ ಬಗ್ಗೆ ಅಶಿಸ್ತಿನ ವರ್ತನೆಯ ದೂರು ಬಂದಲ್ಲಿ/ಇಂಟರ್‌ನೆಟ್ ದುರುಪಯೋಗ ಮಾಡಿದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು.

11) ವಿದ್ಯಾಸಂಸ್ಥೆಗೆ ಸೇರಿದ ಯಾವುದೇ ಸೊತ್ತು ಸಲಕರಣೆಗಳನ್ನು ಹಾಳುಮಾಡಬಾರದು. ಹಾಳುಗೆಡವಿದಲ್ಲಿ ವಿಧಿಸಲ್ಪಡುವ ದಂಡವನ್ನು ವಿದ್ಯಾರ್ಥಿಯು ಕೊಡಬೇಕು.

12) ವಿದ್ಯಾರ್ಥಿಗಳು ವಿದ್ಯಾನಿವೇಶನದೊಳಗೆ ವಾಹನಗಳನ್ನು ಚಲಾಯಿಸಲು ಅವಕಾಶ ಇಲ್ಲ.

13) ತಮಗೆ ವಾಸಕ್ಕೆ ಕೊಡಲ್ಪಟ್ಟ ಕೋಣೆಯ ಹೊರತು ಇತರರ ಕೋಣೆಗಳಿಗೆ ವಿದ್ಯಾರ್ಥಿಗಳು ಪ್ರವೇಶಿಸಬಾರದು.

14) ವಿದ್ಯಾರ್ಥಿಗಳ ಪತ್ರವ್ಯವಹಾರಗಳು ಪರಿಶೋಧನೆಗೆ ಒಳಪಡುತ್ತವೆ.

15) ವಿದ್ಯಾರ್ಥಿಗಳು ಪೂರ್ವಾನುಮತಿಯಿಲ್ಲದೆ ತಮ್ಮ ವಿದ್ಯಾನಿವೇಶನದಿಂದ ಹೊರಗೆ ಹೋಗಬಾರದು.

16) ನಿಯಮ ನಿಬಂಧನೆಗಳನ್ನು ಪಾಲಿಸದೆ ಶಿಸ್ತನ್ನು ಉಲ್ಲಂಘಿಸಿದರೆ ಅವನಿಗೆ ದಂಡ ವಿಧಿಸಲಾಗುವುದು ಅಥವಾ ಅವನನ್ನು ವಿದ್ಯಾರ್ಥಿನಿಲಯದಿಂದ ಹೊರ ಹಾಕಲಾಗುವುದು.

## 11. ಪೋಷಕರಿಗೆ ವಿಶೇಷ ಸೂಚನೆಗಳು

1) **ಹೆತ್ತವರು ಮತ್ತು ಪೋಷಕರು ಪದೇ ಪದೇ ವಿದ್ಯಾರ್ಥಿನಿಲಯಕ್ಕೆ ಭೇಟಿ ನೀಡಬಾರದು. ಹೊಸದಾಗಿ ದಾಖಲು ಮಾಡಿದವರು, ದಾಖಲಾತಿಯ ಬಳಿಕ ಒಂದು ತಿಂಗಳ ತನಕ ಮಕ್ಕಳನ್ನು ಕಾಣಲು ಬರುವುದಕ್ಕೆ ಅವಕಾಶವಿರುವುದಿಲ್ಲ.**

2) ಮಕ್ಕಳ ಭೇಟಿಗಾಗಿ ಬರುವವರು ರಜಾದಿನಗಳಲ್ಲಿ ಮಾತ್ರ ಬರಬೇಕು. ಹಾಗೆ ಬಂದವರು ವಾರ್ಡನರ ಅನುಮತಿಯನ್ನು ಪಡೆದು ಮಕ್ಕಳನ್ನು ಕರೆಸಿ ಮಾತನಾಡಬಹುದು. ನೇರವಾಗಿ ಮಕ್ಕಳ ವಸತಿ ಕೋಣೆಗಳಿಗಾಗಲೀ. ಅಧ್ಯಯನದ ಕೋಣೆಗಳಿಗಾಗಲೀ, ಹೋಗುವುದಕ್ಕೆ ಅವಕಾಶವಿಲ್ಲ. ಯಾವುದೇ ಕಾರಣಕ್ಕಾಗಿ ಮಕ್ಕಳನ್ನು ವಿದ್ಯಾರ್ಥಿನಿಲಯದ ಪರಿಧಿಯಿಂದ ಹೊರಗೆ ಕರೆದುಕೊಂಡು ಹೋಗುವುದಕ್ಕೆ ಅವಕಾಶವಿಲ್ಲ. ಪ್ರಾರ್ಥನಾ ವೇಳೆ ಹಾಗೂ ಸಭೆ–ಸಮಾರಂಭಗಳ ಸಂದರ್ಭದಲ್ಲಿ ಮಕ್ಕಳನ್ನು ತಮ್ಮೊಂದಿಗೆ ಇಟ್ಟುಕೊಳ್ಳಲು ಅವಕಾಶವಿಲ್ಲ. ನೀವೂ ಪ್ರಾರ್ಥನೆಯಲ್ಲಿ ಭಾಗವಹಿಸಬಹುದು.

3) ಮಕ್ಕಳನ್ನು ನೋಡಲು ಬರುವಾಗ ಹೆತ್ತವರು ಹಾಗೂ ಪೋಷಕರು ಹಣ್ಣು ಹಂಪಲು, ಸಿಹಿತಿಂಡಿಗಳನ್ನು ಹೊರತು ಇನ್ನಿತರ ತಿನಿಸುಗಳನ್ನು ತಂದು ಕೊಡಬಾರದು.

4) ಹಾಸ್ಟೆಲು ವಿದ್ಯಾರ್ಥಿಗಳಿಗೆ ಮಧ್ಯಾವಧಿ ರಜೆ ಮತ್ತು ಬೇಸಿಗೆ ರಜೆಯಲ್ಲಿ ಮಾತ್ರ ಮನೆಗೆ ಹೋಗಲು ಅವಕಾಶವಿರುತ್ತದೆ.

5) ಸಂಸ್ಥೆಯ ಒಕ್ಕೂಟ ವ್ಯವಸ್ಥೆಯಡಿಯಲ್ಲಿ ನಿಗದಿತ ದಿನಗಳಲ್ಲಿ ಶೈಕ್ಷಣಿಕ/ ಆಧ್ಯಾತ್ಮಿಕ ಕಾರ್ಯಕ್ರಮಗಳು ಹಾಗೂ ಕ್ರೀಡಾಕೂಟ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಕಡ್ಡಾಯವಾಗಿದೆ.

6) ಮದ್ಯ, ಡ್ರಗ್ಸ್ ಇತ್ಯಾದಿ ಅಮಲು ಸೇವನೆ ಮಾಡಿಕೊಂಡು ಯಾರೂ ವಿದ್ಯಾನಿವೇಶನಕ್ಕೆ ಬರಕೂಡದು. ವಿದ್ಯಾನಿವೇಶನದಲ್ಲಿ ಧೂಮಪಾನ, ಮದ್ಯಪಾನ,

ಮೊಟ್ಟೆ, ಮಾಂಸಾಹಾರ ನಿಷೇಧಿಸಲಾಗಿದೆ. ಇವುಗಳನ್ನು ಇಲ್ಲಿ ತರುವುದು ಕೂಡಾ ಆಕ್ಷೇಪಾರ್ಹ.

7) ಮಕ್ಕಳಿಗೆ ಅಸೌಖ್ಯವಾದಾಗ, ವಾರ್ಡನರ ವಿವೇಚನೆಯಂತೆ ವೈದ್ಯಕೀಯ ಚಿಕಿತ್ಸೆಯನ್ನು ನಡೆಸಲಾಗುವುದು. ಚಿಕಿತ್ಸೆಯ ಬಗ್ಗೆ ಮುನ್ನೆಚ್ಚರಿಕೆ ವಹಿಸುವ ಅಗತ್ಯವಿದ್ದರೆ ದಾಖಲಾತಿ ಸಂದರ್ಭದಲ್ಲಿ ವಾರ್ಡನರಲ್ಲಿ ತಿಳಿಸಬೇಕು. ಚಿಕಿತ್ಸೆಯ ಖರ್ಚುವೆಚ್ಚವನ್ನು ಪೋಷಕರು ನೀಡಬೇಕಾಗುವುದು.

8) ವಿದ್ಯಾರ್ಥಿ ಮತ್ತು ಅಧ್ಯಾಪಕರೊಳಗೆ ಉತ್ತಮ ಬಾಂಧವ್ಯವೇರ್ಪಡುವಂತೆ ಪೋಷಕರು ನಮ್ಮೊಂದಿಗೆ ಸಹಕರಿಸಬೇಕು. ವಿದ್ಯಾರ್ಥಿಗೆ ಸಂಸ್ಥೆ ಮತ್ತು ಅಧ್ಯಾಪಕವೃಂದದ ಕಡೆಗಿರುವ ಗೌರವವನ್ನು ಹಾಳುಗೆಡಹುವ ಯಾವುದೇ ಮಾತುಗಳನ್ನು ಪೋಷಕರು ಆಡಬಾರದು. ವಿದ್ಯಾಸಂಸ್ಥೆಯ ಮತ್ತು ಅಧ್ಯಾಪಕ ವೃಂದದ ಮೇಲೆ ತೋರುವ ಅಗೌರವವು ಆ ವಿದ್ಯಾರ್ಥಿಯ ಅಧ್ಯಯನದ ಮೇಲೆ ಕೆಟ್ಟ ಪರಿಣಾಮ ಬೀರುವುದು.

9) ದೀರ್ಘರಜೆಯಲ್ಲಿ ಮಕ್ಕಳು ಮನೆಗೆ ಬಂದಾಗ ಶಾಲೆಯಲ್ಲಿ ಬೆಳೆಸಿಕೊಂಡ ಉತ್ತಮ ಅಭ್ಯಾಸಗಳನ್ನೇ ಅವರು ಮುಂದುವರಿಸಲು ಹೆತ್ತವರು ಪ್ರೋತ್ಸಾಹಿಸಬೇಕು. (ಬೆಳಿಗ್ಗೆ ಏಳುವುದು, ಪ್ರಾರ್ಥನೆ, ಯೋಗಾಸನ, ಅಧ್ಯಯನ ಇತ್ಯಾದಿ.)

10) ಸಂಬಂಧಪಟ್ಟವರ ಅನುಮತಿಯಿಲ್ಲದೆ ವಿದ್ಯಾರ್ಥಿಯು ಹಾಸ್ಟೆಲಿನಿಂದ ಹೊರಟುಹೋದರೆ ವಿದ್ಯಾರ್ಥಿ ನಿಲಯವು ಜವಾಬ್ದಾರಿಯಾಗುವುದಿಲ್ಲ.

11) ಹೆತ್ತವರಿಗೆ/ಪೋಷಕರಿಗೆ ನಿವೇಶನದಲ್ಲಿ ಉಳಿದುಕೊಳ್ಳಲು (Accommodation) ವ್ಯವಸ್ಥೆ ಇರುವುದಿಲ್ಲ.

12) ಹೆತ್ತವರು ಮತ್ತು ಪೋಷಕರು ತಮ್ಮ ಮಕ್ಕಳನ್ನು ದೂರವಾಣಿಗೆ ಕರೆದು ಅಥವಾ ಬೇರೆ ಆಗಂತುಕರ ಮೊಬೈಲ್ ಮೂಲಕ ಮಾತನಾಡುವುದಕ್ಕೆ ಅವಕಾಶವಿರುವುದಿಲ್ಲ. ಬದಲಾಗಿ ಮಕ್ಕಳೆ ವಾರ್ಡನರ ಒಪ್ಪಿಗೆ ಪಡೆದು ತಮ್ಮ ಹೆತ್ತವರೊಡನೆ ವಾರಕ್ಕೊಮ್ಮೆ ಮಾತನಾಡಬಹುದು.

13) ಮಾಹಿತಿ ಪತ್ರಿಕೆಯಲ್ಲಿ ಕೊಟ್ಟಿರುವ ಎಲ್ಲಾ ವಿಷಯಗಳನ್ನೂ ಮೊದಲೇ ಓದಿನೋಡಿ ಸರಿಯಾಗಿ ತಿಳಿದುಕೊಂಡು ಆಮೇಲೆಯೇ ವಿದ್ಯಾರ್ಥಿಯನ್ನು ದಾಖಲಾತಿ ಮಾಡಿದಲ್ಲಿ ಯಾವ ಸಮಸ್ಯೆಗೂ ಆಸ್ಪದವಿಲ್ಲ. ಇದಕ್ಕೆ ತಪ್ಪಿದಲ್ಲಿ ಮುಂದೆ ಬರುವ ಸಮಸ್ಯೆಗಳಿಗೆ ವಿದ್ಯಾರ್ಥಿನಿಲಯವು ಹೊಣೆಯಾಗುವುದಿಲ್ಲ. ಇದರಲ್ಲಿರುವ ಎಲ್ಲಾ ನಿಯಮಗಳನ್ನು ಸುಲಲಿತವಾಗಿ ಜಾರಿಗೆ ತರುವುದಕ್ಕೆ ನಮ್ಮ ಎಲ್ಲಾ ವಿದ್ಯಾರ್ಥಿಗಳ ಹೆತ್ತವರ ಹಾಗೂ ಪೋಷಕರ ಬೆಂಬಲ ಮತ್ತು

ಸಹಕಾರಗಳನ್ನು ನಾವು ನಿರೀಕ್ಷಿಸುತ್ತೇವೆ.

14) ವಿದ್ಯಾನಿವೇಶನಕ್ಕೆ ಭೇಟಿ ನೀಡುವಾಗ ಹೆತ್ತವರು/ಪೋಷಕರು ಚಿತ್ರವಿಚಿತ್ರ ಮೈಮಾಟ ಪ್ರದರ್ಶನ ರೀತಿಯ ಉಡುಪುಗಳನ್ನು ಧರಿಸಿಕೊಂಡು ಬರುವುದು ಆಕ್ಷೇಪಾರ್ಹವಾಗಿದ್ದು, ಭಾರತೀಯ ಸಾಂಪ್ರದಾಯಿಕ ಉಡುಪುಗಳನ್ನು ಧರಿಸಿಕೊಂಡು ಬರಬೇಕೆಂದು ನಿರೀಕ್ಷಿಸಲಾಗಿದೆ.

## *XII.* DAILY ROUTINE IN THE HOSTEL

| | | |
|---|---|---|
| Getting up & Ablution | | - 5:00 to 5:20 A.M. |
| Sri Sathya Sai Ashtothara Shatanama | | - 5:20 to 5:30 A.M. |
| Omkara Suprabhatha | | - 5:30 to 5:45 A.M. |
| Yogasana | | - 5:45 to 6:05 A.M. |
| Study and bath in batches (3 Periods of 40 Min duration) | | - 6:10 to 8:10 A.M. |
| Breakfast | High School | -7:45 to 8:15 A.M. |
| | College | - 8:20 to 8:45 A.M. |
| Morning Prayer | | - 9:05 to 9:25 A.M. |
| Lunch | High School | - 12:30 to 1:00 P.M. |
| | College | - 1:05 to 1:35 P.M. |
| Evening Tiffin | | - 4:25 to 4:40 P.M. |
| Games | | - 4:45 to 5:45 P.M. |
| Evening Prayer & chintana | | - 6:05 to 6:40 P.M. |
| Study & Supper (in Batches) | | - 6:45 to 9:45 P. M. |
| Recorded "*Karacharana Krithamva . . .*" Prayer over mike and rest | | - 9:55 P.M. |

### *XIII. LOCATION OF THE CAMPUS AND CONVEYANCE*

1. Alike : 46 Kms from Mangaluru
   20 Kms from Puttur
   6 Kms from Vittal
2. Mangaluru to Alike (Via B.C. Road)
   07-40 A.M.(KSRTC Bus Stand - Lalbagh)

09-30 A.M. (State Bank)
10-50 A.M.(State Bank)
02-10 P.M. (State Bank)
06-50 P.M. (State Bank)

3. B C Road to Alike (Via Vittal) 07-40 A.M.

4. Puttur to Alike (Via Vittal) 07-00 A.M.
09-15 A.M.
01-15 P.M.
03-40 P.M.
05-15 P.M.

5. Privet Bus Vittal To Alike 07-00 P.M.

6. Alike to Mangaluru 06-00 A.M.
07-00 A.M.
08-45 A.M.
11-00 A.M.
01-00 P.M.

7. Alike to BC Road 06-25 P.M.

8. Alike to Puttur 08-10 A.M.
10-10 A.M.
02-15 P.M.
04-40 P.M.

9. Alike to Bengaluru 08-30 P.M.

10. Bengaluru to Alike 10-15 A.M.

11. There are Govt. buses, Private buses, Service cars plying to Vittal from Mangaluru and Puttur frequently. From Vittal one can reach Alike by Service car/autorikshas also.

12. One can get down at Padibagilu and walk the distance of 1 k.m. to Alike if one takes buses plying from Vittal to Kasaragod, Perla, Peruvai.

13. Autorikshas are available at Padibagilu.

**************************

## 14. ಲಿಖಿತ ಪರೀಕ್ಷೆಯ ವಿಷಯಗಳು ಮತ್ತು ಅದರ ವಿವರಗಳು

## XIV. WRITTEN TEST - SYLLABUS

ಪರೀಕ್ಷೆಯಲ್ಲಿ ಗಣಕಯಂತ್ರ ***(calculator)*** ಉಪಯೋಗ ನಿಷೇಧಿಸಲಾಗಿದೆ.

### *Syllabus for Class - VI*

### ENGLISH

*Marks : 25* *Time : 30 Minutes*

1. Parts of speech (noun, verb, adjective, adverb, preposition, relative pronoun)
2. Spelling letters
3. Tenses : Simple Present, Simple past,
4. Rhyming words
5. Opposites
6. Degrees of Comparison
7. Numbers
8. Articles
9. General questions
10. Paragraph writing
11. Letter writing (Informal)
12. Comprehension (Questions on unseen passage)

### ಕನ್ನಡ

(ಅಂಕಗಳು: 25 ಸಮಯ: 30 ನಿಮಿಷ)

1. ಕನ್ನಡ ಅಕ್ಷರಮಾಲೆ.
2. ಪದಗಳನ್ನು ಕೂಡಿಸಿ ಮತ್ತು ಬಿಡಿಸಿ ಬರೆಯುವುದು.
3. ಸಮಾನಾರ್ಥಕ, ನಾನಾರ್ಥಕ ಮತ್ತು ವಿರೋಧ ಪದಗಳು.
4. ವಚನ, ಲಿಂಗ ಮತ್ತು ವಿಭಕ್ತಿ ಪ್ರತ್ಯಯಗಳು.
5. ಸಜಾತೀಯ ಮತ್ತು ವಿಜಾತೀಯ ಸಂಯುಕ್ತಾಕ್ಷರಗಳು.
6. ವಾಕ್ಯರಚನೆ.
7. ಸಂಧಿಗಳು – ಲೋಪ, ಆಗಮ ಮತ್ತು ಆದೇಶ.
8. ಕಾಲಗಳ ಪರಿಚಯ.

9. ನಾಮಪದ, ಕ್ರಿಯಾಪದ ಮತ್ತು ವಿಶೇಷಣಗಳು.
10. ಒಗಟುಗಳು ಮತ್ತು ಗಾದೆಗಳು.
11. ಲೇಖನ ಚಿಹ್ನೆಗಳು.
12. ಪತ್ರಲೇಖನ.
13. ಮೌಲ್ಯಾಧಾರಿತ ಪ್ರಶ್ನೆಗಳು.

## Mathematics

(Marks: 25 Time: 30 Minutes) (ಅಂಕಗಳು: 25 ಸಮಯ:30 ನಿಮಿಷ)

(Geometry box is not required) (ಕಂಪಾಸು ಪೆಟ್ಟಿಗೆ ಅಗತ್ಯವಿಲ್ಲ)

1. Whole Numbers - ಪೂರ್ಣಸಂಖ್ಯೆಗಳು.
2. Fractions - ಭಿನ್ನರಾಶಿ
3. Decimals - ದಶಮಾಂಶ ಭಿನ್ನರಾಶಿಗಳು.
4. Weight & Volume - ತೂಕ ಮತ್ತು ಗಾತ್ರ.
5. Factors & Multiples - ಅಪವರ್ತನಗಳು ಮತ್ತು ಅಪವರ್ತ್ಯಗಳು
6. Angles & Types of angles - ಕೋನಗಳು ಮತ್ತು ಕೋನಗಳ ವಿಧಗಳು.
7. Perimeter & Area - ಸುತ್ತಳತೆ ಮತ್ತು ವಿಸ್ತೀರ್ಣ
8. Circle - construction of circle - ವೃತ್ತ – ವೃತ್ತದ ರಚನೆ.
9. Mental ability - ಮಾನಸಿಕ ಸಾಮರ್ಥ್ಯ.
10. Value based questions - ಮೌಲ್ಯ ಆಧಾರಿತ ಪ್ರಶ್ನೆಗಳು.

## Science ವಿಜ್ಞಾನ

(Marks: 25, Time: 30 minutes) (ಅಂಕಗಳು: 25, ಸಮಯ: 30 ನಿಮಿಷ)

1. Electricity - ವಿದ್ಯುಚ್ಛಕ್ತಿ
2. Matter - ದ್ರವ್ಯಗಳು
3. Food - ಆಹಾರ
4. Air and Water - ಗಾಳಿ ಮತ್ತು ನೀರು.
5. Organisms - ಜೀವಿಗಳು.
6. Energy - ಶಕ್ತಿ.
7. Plants and Animals - ಸಸ್ಯಗಳು ಮತ್ತು ಪ್ರಾಣಿಗಳು.

## SYLLABUS FOR CLASS - VIII

# ENGLISH

*[Marks: 25 , Time: 30 Minutes]*

1) Question formation
2) Tenses.
3) Parts of speech.
4) Re-arranging the jumbled letters to form meaningful words.
5) Numbers.
6) Kinds of sentences.
7) Genders.
8) Prefixes and suffixes.
9) Unseen passage (comprehension)
10) Paragraph writing.
11) Letter writing.
12) Active voice and Passive voice.

# ಕನ್ನಡ

(ಸಮಯ: 30 ನಿಮಿಷ, ಅಂಕಗಳು: 25)

1. ಕನ್ನಡ ವರ್ಣಮಾಲೆ.
2. ಪದಗಳ ಅರ್ಥ, ಲೇಖನ ಚಿಹ್ನೆಗಳು, ಕಾಲ, ಲಿಂಗ, ವಚನ, ಪ್ರಾಸ, ವಿಭಕ್ತಿ, ಕ್ರಿಯಾಪದ, ಅನ್ಯದೇಶ ಪದ, ತತ್ಸಮ–ತದ್ಭವ ಪದಗಳು.
3. ಸಂಧಿಗಳು – ಕನ್ನಡ ಸಂಧಿಗಳು ಮತ್ತು ಸಂಸ್ಕೃತ ಸಂಧಿಗಳು.
4. ಸಮಾಸಗಳು.
5. ನುಡಿಗಟ್ಟುಗಳು, ಗಾದೆಮಾತುಗಳು.
6. ಕನ್ನಡದ ಸಾಮಾನ್ಯ ಜ್ಞಾನ.
7. ವಿಶೇಷಣಗಳು.
8. ವಾಕ್ಯರಚನೆ.
9. ಕನ್ನಡ ಕವಿಗಳು.
10. ಪತ್ರಲೇಖನ – ಔಪಚಾರಿಕ, ಅನೌಪಚಾರಿಕ, ರಜೆ ಅರ್ಜಿ.
11. ಪ್ರಬಂಧ.
12. ಮೌಲ್ಯಾಧಾರಿತ ಪ್ರಶ್ನೆಗಳು.

## SANSKRIT

(Marks : 25    Time : 30 Minutes)

1. वर्णमाला , वर्णविन्यासः च।
2. विलोम शब्दः, लिङ्ग, वचन विषय ज्ञानम्।
3. सामान्य शब्दानाम् अर्थः।
4. वाक्य निर्माणम्।
5. संख्यावाचकाः – पञ्चाशत् पर्यन्तम्
6. लकारः – लट्, लङ्, लृट् ।
7. शब्द रूपाणि – राम, रमा, फल
8. सर्वनाम शब्दाः – तद्–त्रिषु लिङ्गेषु, अस्मद् , युष्मद्
9. सामान्य प्रश्नाः।

## HINDI

(Marks : 25    Time : 30 Minutes)

I. व्याकरण:– 1. संज्ञा 2. सर्वनाम 3. विशेषण 4. प्रेरणार्थक क्रिया 5. क्रिया विशेषण 6. योजक 7. काल 8. वचन 9. लिंग 10. विलोम शब्द.

II. वाक्यों में प्रयोग करना.

III. अनुवाद (मातृभाषा से हिन्दी में/हिन्दी से मातृभाषा में)

IV. निबंध

V. एक से सौ तक गिनती

VI. कुछ सामान्य प्रश्न

## Mathematics

(ಅಂಕಗಳು: 25 ಸಮಯ: 30 ನಿಮಿಷ) (Marks: 25 Time: 30 minutes)

(Geometry box is not required) (ಕಂಪಾಸು ಪೆಟ್ಟಿಗೆ ಅಗತ್ಯವಿಲ್ಲ)

1. Fractions and decimals. – ಭಿನ್ನರಾಶಿ ಮತ್ತು ದಶಮಾಂಶಗಳು.
2. Simple equations. - ಸರಳ ರೇಖೀಯ ಸಮೀಕರಣಗಳು.
3. Mean, Median and Mode. - ಸರಾಸರಿ, ಮಧ್ಯಾಂಕ ಮತ್ತು ರೂಢಿಬೆಲೆ.
4. Ratio and Proportion. - ಅನುಪಾತ ಮತ್ತು ಸಮಾನುಪಾತ.
5. Rational numbers. – ಭಾಗಲಬ್ಧ ಸಂಖ್ಯೆಗಳು.
6. Mensuration. - ಕ್ಷೇತ್ರ ಗಣಿತ.

7. Integers - ಪೂರ್ಣಾಂಕಗಳು.

8. Exponents and Powers – ಘಾತಾಂಕಗಳು.

9. Percentage – ಶೇಖಡಾ ಕ್ರಮ.

10. Constuction of triangles. - ತ್ರಿಭುಜಗಳ ರಚನೆ.

## Science ವಿಜ್ಞಾನ

(Marks: 25 Time: 30 minutes) (ಅಂಕಗಳು: 25 ಸಮಯ: 30 ನಿಮಿಷ)

**Heat:** Sources of heat, Temperature, Measurement of temperature and types of thermometer.

**Acids, Bases and Salts:**

Meaning of acids and Bases, Types of acids, properties of acids and Bases. and Indicators.

**Light:** Luminous and non-luminous bodies, Reflcetion of light, spherecal mirrors, concave and convexlens.

**Reproduction:** Flower, pollination, Types of reproduction in plants and micro organisms.

**Electrical Circuits:** Components of the electrical circut and battery.

**Water:** Availability of water. Forms of water, Ground water, and water management.

**Food and its components:** Balanced diet, carbohydrates proteins, lipids, minerals and vitamins.

**ಉಷ್ಣ:** ಉಷ್ಣದ ಮೂಲಗಳು, ತಾಪ, ತಾಪದ ಅಳತೆ, ಉಷ್ಣತಾ ಮಾಪಕದ ವಿಧಗಳು.

**ಆಮ್ಲಗಳು, ಪ್ರತ್ಯಾಮ್ಲಗಳು ಮತ್ತು ಲವಣಗಳು:**

ಆಮ್ಲ ಪ್ರತ್ಯಾಮ್ಲಗಳು ಅರ್ಥ. ಆಮ್ಲಗಳ ವಿಧಗಳು.

ಆಮ್ಲ ಪ್ರತ್ಯಾಮ್ಲಗಳ ಲಕ್ಷಣಗಳು, ಸೂಚಕಗಳು (Indicators.)

**ಬೆಳಕು:** ಸ್ವಯಂಪ್ರಕಾಶಿತ ಮತ್ತು ಸ್ವಯಂ ಪ್ರಕಾಶಿತವಲ್ಲದ ಕಾಯಗಳು, ಬೆಳಕಿನ ಪ್ರತಿಫಲನ, ಗೋಲೀಯ ದರ್ಪಣ, ಪೀನ ಮಸೂರ, ನಿಮ್ನ ಮಸೂರ.

**ಸಸ್ಯಗಳಲ್ಲಿ ಸಂತಾನೋತ್ಪತ್ತಿ:** ಹೂವಿನ ಭಾಗಗಳು, ಪರಾಗಸ್ಪರ್ಶ,

ಸಂತಾನೋತ್ಪತ್ತಿಯ ವಿಧಗಳು, ಸಸ್ಯಗಳು ಮತ್ತು ಸೂಕ್ಷ್ಮಜೀವಿಗಳು.

**ವಿದ್ಯುತ್ ಮಂಡಲಗಳು:** ವಿದ್ಯುತ್ ಮಂಡಲದ ಘಟಕಗಳು, ಶುಷ್ಕಕೋಶ

**ನೀರು:** ನೀರಿನ ದೊರೆಯುವಿಕೆ, ನೀರಿನ ಸ್ಥಿತಿಗಳು, ನೀರಿನ ನಿರ್ವಹಣೆ.

**ಆಹಾರ ಮತ್ತು ಅದರ ಘಟಕಗಳು:** ಸಮತೋಲಿತ ಆಹಾರ, ಕಾರ್ಬೋಹೈಡ್ರೇಟ್‌ಗಳು, ಪ್ರೋಟೀನ್‌ಗಳು, ಕೊಬ್ಬುಗಳು, ಖನಿಜಗಳು ಮತ್ತು ಜೀವಸತ್ವಗಳು.

## SYLLABUS FOR - PUC

# ENGLISH

*[Time: 40 minutes, Marks : 25]*

1) Tenses.
2)Voice of the verb.
3) Articles and Prepositions.
4) Degrees, negatives, infinitives etc.
5) Transformation of sentences.
6) Framing questions.
7) Subject - verb agreement.
8) Question Tags.
9) Reported speech.
10) Re-arranging sentences.
11) Punctuation.
12) Linkers.
13) Expansion.
14) If clause.
15) Editing paragraphs.
16) Comprehension (Questions on unseen passage)
17) Letter Writing.

# Mathematics

(Time : 1 hr  Marks: 45)

(Geometry box is not required)

**Algebra:** Identities : $(a+b)^2$; $(a-b)^2$; $(a+b)$ $(a-b)$; $(x+a)$ $(x+b)$; $(a+b+c)^2$; $(a+b)^3$; $(a-b)^3$ etc, application of identites; $(a^3+b^3)$; $(a^3-b^3)$

**Quadratic Equation:** Solving linear and quadratic equation, application of quadratic equations, Relation between roots and cocfficients of quadratic equations, nature of roots and application problems.

**Real Numbers:** Stating Euclid's lemma, finding hcf and lcm of two numbers stating fundametal Theorem of arithmatic.

**Geometry:** Pythagoras theorem and related problems, Basic proportionality theorem, areas of circle, triangle, quadrilateral, parallelogram, rhombus, trapezium.

**Circles:** Tangent to a circle and problems.

**surface areas and volumes:** Cone, cylinder, sphere, frustum of a cone, combination of solids.

**Co-ordinate Geometry:** Distance formula, section formula and related problems.

**Trignometry:** Trignometric ratios, trignometric ratios of some specific angles, trignometric identities, heights and distances,

**Arithmetic:** Arithmetic progressions - various types of problems. Probability and its problems.

**Statistics:** mean, median, mode - related problems.

# ಗಣಿತ

(ಸಮಯ: 1 ಗಂಟೆ, ಅಂಕಗಳು: 45) (ಕಂಪಾಸು ಪೆಟ್ಟಿಗೆ ಅಗತ್ಯವಿಲ್ಲ)

**ಬೀಜಗಣಿತ:** ನಿತ್ಯಸಮೀಕರಣಗಳು: $(a+b)^2$; $(a-b)^2$; $(a+b)(a-b)$; $(x+a)(x+b)$; $(a+b+c)^2$; $(a+b)^3$; $(a-b)^3$ $(a^3+b^3)$; $(a^3-b^3)$ ಇತ್ಯಾದಿಗಳ ಅನ್ವಯಗಳು.

**ವರ್ಗಸಮೀಕರಣಗಳು:** ರೇಖಾತ್ಮಕ ಮತ್ತು ವರ್ಗಸಮೀಕರಣಗಳನ್ನು ಬಿಡಿಸುವುದು. ಸಮೀಕರಣದ ಮೂಲಗಳು ಮತ್ತು ಸಹಗುಣಕಗಳ ನಡುವಿನ ಸಂಬಂಧಗಳು. ಮೂಲಗಳ ಸ್ವಭಾವ, ವರ್ಗಸಮೀಕರಣವನ್ನು ಆಧರಿಸಿದ ವ್ಯಾವಹಾರಿಕ ಸಮಸ್ಯೆಗಳು.

**ವಾಸ್ತವ ಸಂಖ್ಯೆಗಳು:** ಯೂಕ್ಲಿಡ್‌ನ ಭಾಗಾಕಾರದ ಪ್ರಮೇಯ. ಮ ಸಾ ಅ ಮತ್ತು ಲ ಸಾ ಅ ಕಂಡು ಹುಡುಕುವುದು. ಅಂಕಗಣಿತದ ಮೂಲ ಪ್ರಮೇಯ ನಿರೂಪಿಸುವುದು.

**ರೇಖಾಗಣಿತ:** ಪೈಥಾಗೊರಸ್‌ನ ಪ್ರಮೇಯ ಮತ್ತು ಅದರ ಮೇಲಿನ ಲೆಕ್ಕಗಳು, ಮೂಲ ಸಮಾನುಪಾತತೆಯ ಪ್ರಮೇಯ.

**ವಿಸ್ತೀರ್ಣಗಳು:** ವೃತ್ತ, ತ್ರಿಭುಜ, ಚತುರ್ಭಜ, ತ್ರಾಪಿಜ್ಯ, ಸಮಾಂತರ ಚತುರ್ಭುಜ, ವಜ್ರಾಕೃತಿ ಇವುಗಳ ವಿಸ್ತೀರ್ಣಗಳು.

**ವೃತ್ತಗಳು:** ವೃತ್ತಕ್ಕೆ ಸ್ಪರ್ಶಕ ಮತ್ತು ಸಂಬಂಧಿಸಿದ ಲೆಕ್ಕಗಳು.

**ಮೇಲ್ಮೈ ವಿಸ್ತೀರ್ಣಗಳು ಮತ್ತು ಘನಫಲ:** ಶಂಕು, ಸಿಲಿಂಡರ್, ಗೋಳ, ಶಂಕುವಿನ ಭಿನ್ನಕ, ಜೋಡಿಸಿದ ಘನಾಕೃತಿಗಳು.

**ನಿರ್ದೇಶಾಂಕ ರೇಖಾಗಣಿತ:** ದೂರದ ಸೂತ್ರ, ಭಾಗಪ್ರಮಾಣಸೂತ್ರ ಮತ್ತು ಸಂಬಂಧಿಸಿದ ಲೆಕ್ಕಗಳು.

**ತ್ರಿಕೋನಮಿತಿ:** ತ್ರಿಕೋನಮಿತಿಯ ಅನುಪಾತಗಳು, ನಿರ್ದಿಷ್ಟ ಕೋನಗಳಿಗೆ ತ್ರಿಕೋನಮಿತಿಯ ಬೆಲೆಗಳು, ತ್ರಿಕೋನಮಿತಿ ನಿತ್ಯಸಮೀಕರಣಗಳು, ಎತ್ತರ ಮತ್ತು ದೂರಕ್ಕೆ ಸಂಬಂಧಿಸಿದ ಸಮಸ್ಯೆಗಳು, ಪೂರಕ ಕೋನಗಳಿಗೆ ತ್ರಿಕೋನಮಿತಿ ಅನುಪಾತಗಳು.

**ಅಂಕಗಣಿತ:** ಸಮಾಂತರ ಶ್ರೇಢಿ ಮತ್ತು ಸಂಬಂಧಿಸಿದ ಸಮಸ್ಯೆಗಳು. ಸಂಭವನೀಯತೆ ಮತ್ತು ಅದರ ಲೆಕ್ಕಗಳು.

**ಸಂಖ್ಯಾಶಾಸ್ತ್ರ:** ಸರಾಸರಿ ಬೆಲೆ, ಮಧ್ಯಮ ಬೆಲೆ ಮತ್ತು ರೂಢಿಬೆಲೆ ಮತ್ತು ಸಂಬಂಧಿಸಿದ ಪ್ರಶ್ನೆಗಳು.

# Science

(Time : 45 minutes, Marks: 45)

**Physics:**

1. Newton's laws of motion.
2. Light: reflection, refraction and despurssion.
3. Gravitation.
4. Work, Power, Energy.
5. Sound.
6. Electricity.

**Chemistry:**

1. Organic Chemistry:

   IUPAC Nomenclature, Functional groups, carbon and its compounds.
2. Acids, Bases and salts.

   Balancing chemical reactions.
3. Metals and non-metals.
4. Periodic classification; Variation of atomic Properties in the periodic table.

**Biology:**

1. Human eye.
2. Mendels evolution of life.
3. Control and co-ordination.
4. Reproduction.

# ವಿಜ್ಞಾನ

(ಸಮಯ: 45 ನಿಮಿಷ,  ಅಂಕಗಳು: 45)

**ಭೌತಶಾಸ್ತ್ರ:**

1. ನ್ಯೂಟನ್ನಿನ ಚಲನೆಯ ನಿಯಮ.
2. ಬೆಳಕು: ಪ್ರತಿಫಲನ, ವಕ್ರೀಭವನ, ವರ್ಣ ವಿಭಜನೆ.
3. ಗುರುತ್ವಾಕರ್ಷಣೆ.
4. ಕೆಲಸ, ಸಾಮರ್ಥ್ಯ, ಶಕ್ತಿ.
5. ಶಬ್ಧ.
6. ವಿದ್ಯುಚ್ಛಕ್ತಿ.

**ರಸಾಯನ ಶಾಸ್ತ್ರ:**

1. ಐ ಯುಪಿ ಎ ಸಿ ನಾಮಕರಣ, ಕ್ರೀಯ ಗುಂಪುಗಳು, ಇಂಗಾಲ ಮತ್ತು ಅದರ ಸಂಯುಕ್ತಗಳು.
2. ಆಮ್ಲ, ಪ್ರತ್ಯಾಮ್ಲ ಮತ್ತು ಲವಣಗಳು. ರಾಸಾಯನಿಕ ಸಮೀಕರಣ ಸರಿತೂಗಿಸುವುದು.
3. ಲೋಹಗಳು ಮತ್ತು ಅಲೋಹಗಳು.
4. ಆಧುನಿಕ ಆವರ್ತಕ ಕೋಷ್ಟಕದ ವರ್ಗೀಕರಣ. ಆವರ್ತಕ ಕೋಷ್ಟಕದಲ್ಲಿ ಪರಮಾಣುವಿನ ಬದಲಾವಣೆಯ ಗುಣಗಳು.

**ಜೀವಶಾಸ್ತ್ರ:**

1. ಮಾನವನ ಕಣ್ಣು.
2. ಮೆಂಡಲಿನ ಜೀವ ವಿಕಾಸ.
3. ಸಹಕಾರ ಮತ್ತು ನಿಯಂತ್ರಣ.
4. ಸಂತಾನ ಅಭಿವೃದ್ಧಿ.

**********